CC-O. In Public Domain. Digitized by eGangotri

# ಶೇಷಶಾಯಿ

# ಮತ್ತು

# ನಾಗಪಂಚಮಿ

(ವೈಜ್ಞಾನಿಕ ದೃಷ್ಟಿಯಲ್ಲಿ)



ಎಚ್. ಕೆ. ಎಸ್. ರಾವ್

Sri Vidyabharathi Book Centre, Sringeri

CC-O. In Public Domain. Digitized by eGangotri

## [illegible]

ವೈಜ್ಞಾನಿಕವಾಗಿ ವಿಮರ್ಶೆ ಮಾಡಿರುವ ಕೆಲವು ವಿಷಯಗಳ ಬಗ್ಗೆ ಲೇಖನಗಳು. ಇವುಗಳಲ್ಲಿ ಅನೇಕ ಲೇಖನಗಳು, ಕೆಲವು ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಪುಸ್ತಕ ರೂಪದಲ್ಲಿ ತರುವ ಏರ್ಪಾಟು ನಡೆಯುತ್ತಿದೆ. ಈ ದಿಶೆಯಲ್ಲಿ ಆಸಕ್ತಿಯುಳ್ಳ ಸಂಸ್ಥೆಗಳಾಗಲೀ, ಮಠಾಧಿಪತಿಗಳಾಗಲೀ ಅಥವಾ ನಮ್ಮ ಸನಾತನ ಧರ್ಮ ಸಂಸ್ಕೃತಿಗಳಲ್ಲಿ ಅಭಿಮಾನವುಳ್ಳ ಸಾರ್ವಜನಿಕರೇ ಆಗಲೀ, ಆರ್ಥಿಕ ನೆರವು ಕೊಟ್ಟರೆ ಶೀಘ್ರದಲ್ಲೇ ಇವುಗಳು ಪ್ರಕಟಣೆಯಾಗಿ ಜನ ಸಾಮಾನ್ಯರ ಜ್ಞಾನ ದಾಹವನ್ನು ಸ್ವಲ್ಪ ಮಟ್ಟಿಗಾದರೂ ತೃಪ್ತಿ ಪಡಿಸಲು ಅವಕಾಶವಾಗುತ್ತದೆ.

1. ಕರ್ಣವೇದ ಏಕೆ ?
2. ಪುಣ್ಯನದಿಗಳಲ್ಲಿ ಸ್ನಾನ ಏಕೆ ಮಾಡಬೇಕು ?
3. ಮಹಿಳೆಯರು ಬಳೆ ಏಕೆ ತೊಡಬೇಕು ?
4. ವಿನಾಯಕ ಚತುರ್ಥಿ ಭಾದ್ರಪದದಲ್ಲೇ ಏಕೆ ಬರುತ್ತೆ ?
5. ವಿನಾಯಕ ಚತುರ್ಥಿಯಂದು ಚಂದ್ರದರ್ಶನ ಏಕೆ ಕೂಡದು ?
6. ಕಾರ್ತಿಕ ಮಾಸದಲ್ಲಿ ದೀಪ ಏಕೆ ಹಚ್ಚಬೇಕು ?
7. ಉತ್ಥಾನ ದ್ವಾದಶಿಯಂದು ನೆಲ್ಲಿ ಕೊನೆ ತಂದು ಬೃಂದಾವನ ಪೂಜೆ ಏಕೆ ಮಾಡಬೇಕು ?
8. ನರಕ ಚತುರ್ದಶಿಯಂದು ಅಭ್ಯಂಜನ ಏಕೆ ?
9. ಭೋಜನ ಪಾತ್ರೆ ಇವುಗಳ ಮಹತ್ವವೇನು ?
10. ಆರತಿ ಕೆಂಪು ನೀರೇ ಏಕೆ ?
11. ಮುಹೂರ್ತ ಎಂದರೇನು ?
12. ವರ್ಜ್ಯ ಆಹಾರಗಳು ಏಕೆ ?
13. ಅಷ್ಟೋತ್ತರ (108) ಅರ್ಚನೆ, ಸ್ತೋತ್ರ, ಜಪ ಇವುಗಳೆಲ್ಲಾ 108 ಏಕೆ ? 108 ರ ಮಹತ್ವವೇನು ?

(ರಕ್ಷಾ ಪುಟದ ಮೂರನೇ ಪುಟದಲ್ಲಿ ಮುಂದುವರಿದಿದೆ

Sri Vidyabharathi Book Centre, Sringeri

CC-O. In Public Domain. Digitized by eGangotri

# ಶೇಷಶಾಯಿ

## ಮತ್ತು

# ನಾಗಪಂಚಮಿ

(ವೈಜ್ಞಾನಿಕ ದೃಷ್ಟಿಯಲ್ಲಿ)





ಎಚ್. ಕೆ. ಎಸ್. ರಾವ್

ಶ್ರೀ ವಿದ್ಯಾ ಭಾರತೀ
ಪುಸ್ತಕ ಕೇಂದ್ರ,
ಭಾರತೀ ಬೀದಿ, ಶೃಂಗೇರಿ - 577139
ದೂರವಾಣಿ: 08265 250323



Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೆಯ ಮುದ್ರಣ : 1987
ನಾಲ್ಕನೆಯ ಮುದ್ರಣ : 2008

© ಲೇಖಕರದು

ಬೆಲೆ ರೂ. 25-00
ಅಂಚೆ ವೆಚ್ಚ ಪ್ರತ್ಯೇಕ

ಮುದ್ರಕರು : ರಮ್ಯ ಉದ್ಯಮ
ನಾರಾಯಣ ಶಾಸ್ತ್ರಿ ಚಾಮುಂಡಿಪುರಂ,
ಮೈಸೂರು. ದೂರವಾಣಿ : 2331267

Sri Vidyabharathi Book Centre, Sringeri

CC-O. In Public Domain. Digitized by eGangotri

# ಲೇಖಕನ ಎರಡು ಮಾತು

ಇದುವರೆಗೆ ಪ್ರಕಟಣೆಯಾಗಿರುವ ನನ್ನ ಪುಸ್ತಕಗಳನ್ನು ಮತ್ತು ಸ್ಥಳೀಯ ಮಾಸ ಪತ್ರಿಕೆಯಲ್ಲಿ ಪ್ರಕಟಣೆಯಾಗುತ್ತಿರುವ ನನ್ನ ಲೇಖನಗಳನ್ನು ಓದುತ್ತಿರುವ ಮಾನ್ಯ ವಾಚಕರ ಅಪೇಕ್ಷೆಯಂತೆ, ಈ ಪುಸ್ತಕವನ್ನು ಪ್ರಕಟಿಸುತ್ತಿದ್ದೇನೆ. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಇತರ ವಿಷಯಗಳ ಬಗ್ಗೆಯೂ ಸಹ ಶೀಘ್ರವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂದು ಕೋರಿಕೆಗಳು ಬರುತ್ತಿವೆ. ಆರ್ಥಿಕಾನುಕೂಲವಾದಾಗ ಈ ಕೆಲಸ ಆಗಬೇಕು.

ಶೇಷಶಾಯಿ ಮತ್ತು ನಾಗಪಂಚಮಿ - ಎರಡೂ ಬೇರೆ ಬೇರೆ ಲೇಖನಗಳಾದರೂ, ಸರ್ಪದ ವಿಷಯ ಎರಡರಲ್ಲೂ ಇರುವುದರಿಂದ, ಈ ಎರಡು ಲೇಖನಗಳನ್ನೂ ಒಟ್ಟಿಗೆ, ಒಂದೇ ಪುಸ್ತಕದಲ್ಲಿ ಪ್ರಕಟಿಸಿದ್ದೇನೆ.

ಸರ್ಪಗಳ ವಿಷಯದಲ್ಲಿ ನನಗೆ ಮಾಹಿತಿ ಒದಗಿಸಿ ಕೊಟ್ಟ, ಮೈಸೂರು ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ **ಡಾ। ಕೆ. ಎಸ್. ದೇವನಾಥ್** ಅವರಿಗೂ, ಈ ಪುಸ್ತಕದಲ್ಲಿರುವ ಚಿತ್ರಗಳನ್ನು ಸುಂದರವಾಗಿ ಬರೆದುಕೊಟ್ಟ ಸುಪ್ರಸಿದ್ಧ ಕಲಾವಿದರಾದ ಶ್ರೀ ರಾಮನರಸಯ್ಯನವರಿಗೂ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡಿಕೊಟ್ಟ ನೆನಪು ಪ್ರಿಂಟರ್ಸ್ ಮಾಲೀಕರಾದ ಶ್ರೀ ವೆಂಕಟೇಶ್ ಅವರಿಗೂ ನನ್ನ ಅನೇಕ ವಂದನೆಗಳು.

ಕೊನೆಯದಾಗಿ, ಮಾನ್ಯ ವಾಚಕರು, ಈ ಪುಸ್ತಕದಲ್ಲಿರಬಹುದಾದ ದೋಷಗಳನ್ನು ಗಣನೆಗೆ ತೆಗೆದುಕೊಳ್ಳದೆ, ಇದರಲ್ಲಿರುವ ಪರಮಾರ್ಥವನ್ನು ಮಾತ್ರ ಹಂಸಕ್ಷೀರ ನ್ಯಾಯದಂತೆ ವಿಷಯ ಗ್ರಹಣ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

231/1, 7ನೇ ಕ್ರಾಸ್,
ಕ್ಷೇತ್ರಯ್ಯ ರಸ್ತೆ, ಮೈಸೂರು - 24
ಅಕ್ಟೋಬರ್ 1987

ಎಚ್.ಕೆ. ಎಸ್. ರಾವ್



Sri Vidyabharathi Book Centre, Sringeri

## ಪೀಠಿಕೆ

CC-O. In Public Domain. Digitized by eGangotri

ಶ್ರೀಮನ್ನಾರಾಯಣನು ಕ್ಷೀರಸಾಗರದಲ್ಲಿ ಶೇಷಶಾಯಿಯಾಗಿದ್ದಾನೆಂದರೆ, ಅವನು ವೈಕುಂಠವನ್ನು ಏಕೆ ಬಿಟ್ಟು ಬಂದ ಎಂದು ಕೆಲವು ಕುಹಕಿಗಳು, ವಿಚಾರವಾದಿಗಳು ಮತ್ತು ನಾಸ್ತಿಕರು ಹಾಸ್ಯ ಮಾಡುತ್ತಾರೆ. ಇವರುಗಳು ಹೀಗೆ ಹಾಸ್ಯ ಮಾಡಬೇಕಾದ್ದೇ ಸರಿ. ಏತಕ್ಕೆಂದರೆ ಅಜ್ಞಾನಿಗಳು, ಯಾವುದೊಂದರ ಪರಮಾರ್ಥವನ್ನು ತಿಳಿದುಕೊಳ್ಳದೇ ಇರುವುದೇ ಇದಕ್ಕೆ ಮುಖ್ಯ ಕಾರಣ. ದುರದೃಷ್ಟವಶಾತ್ ನಮ್ಮ ಸಮಾಜದಲ್ಲಿ ವಿದ್ವಾಂಸರೆನಿಸಿಕೊಂಡವರು, ಮಠಾಧಿಪತಿಗಳು ಮತ್ತು ವಿಜ್ಞಾನಿಗಳೆನಿಸಿಕೊಂಡವರು, ಇದರ ಪರಮಾರ್ಥವನ್ನು ಒಳಹೊಕ್ಕು ನೋಡುವುದಕ್ಕೆ ಪ್ರಯತ್ನ ಮಾಡದೆ ಇರುವುದರಿಂದ ನಮ್ಮ ಸಂಪದ್ಭರಿತವಾದ ಸಂಸ್ಕೃತಿ ಈ ಅಪಹಾಸ್ಯಕ್ಕೆ ಗುರಿಯಾಗಬೇಕಾಗಿದೆ. ಆದ್ದರಿಂದಲೇ ಭಾಗವತ, ಮಹಾಭಾರತ ಮತ್ತು ಪುರಾಣಗಳನ್ನು ಬರೆದ ಶ್ರೀ ವೇದವ್ಯಾಸರು ಹೀಗೆ ಅಪ್ಪಣೆ ಕೊಡಿಸಿದ್ದಾರೆ.

ವೇದಾಗಮ ಪುರಾಣಜ್ಞಃ ಪರಮಾರ್ಥಂ ನ ವೇತ್ತಿಯಃ |
ವಿಡಂಬಕಸ್ಯ ತಸ್ಯೈವ ತತ್ಸರ್ವಂ ಕಾಕಭಾಷಿತಂ ||

(ವೇದ, ಆಗಮ, ಪುರಾಣಗಳನ್ನು ತಿಳಿದಿದ್ದರೂ, ಯಾರು ಪರಮಾರ್ಥವನ್ನು ತಿಳಿದಿಲ್ಲವೋ, ಆ ಬೂಟಾಟಿಕೆಯವನು ತಿಳಿದಿರುವುದೆಲ್ಲವೂ, ಕಾಗೆಯ ಮಾತುಗಳಂತೆ)

ಪಠಂತಿ ವೇದಶಾಸ್ತ್ರಾಣಿ ಬೋಧಯಂತಿ ಪರಸ್ಪರಂ |
ನ ಜಾನಂತಿ ಪರಂ ತತ್ತ್ವಂ ದರ್ವೀಪಾಕರಸಂ ಯಥಾ ||

(ವೇದಶಾಸ್ತ್ರಗಳನ್ನು ಓದುತ್ತಾರೆ, ಪರಸ್ಪರ ಬೋಧನೆ ಮಾಡುತ್ತಾರೆ ; ಆದರೆ ಸೌಟು ಪಾಕದ ರಸವನ್ನು ಹೇಗೆ ತಿಳಿಯುವುದಿಲ್ಲವೋ ಹಾಗಯೇ ಅವರು ಪರಮ ತತ್ತ್ವವನ್ನು ತಿಳಿಯುವುದಿಲ್ಲ.) ಇದನ್ನು ನೋಡಿದರೆ ನಮ್ಮ ವಿದ್ವಾಂಸರು ಶ್ರೀ ವೇದವ್ಯಾಸರನ್ನೇ ಅರ್ಥ ಮಾಡಿಕೊಂಡಿಲ್ಲವೆಂದರೆ ತಪ್ಪಾಗಲಾರದು. ಶ್ರಿಮತಸ್ಥಾಚಾರ್ಯರು, ಕಾಲ ದೇಶಕ್ಕನುಗುಣವಾಗಿ ಆಗಿನ ಜನರ ಮನಃ ಪರಿವರ್ತನೆಗೆ ಎಷ್ಟು ಬೇಕೋ ಅಷ್ಟನ್ನು ಅನುಗ್ರಹ ಮಾಡಿದ್ದಾರೆ. ಆದರೆ ಈಗ ಕಾಲ ಬದಲಾವಣೆಯಾಗಿದೆ. ಜನರು, ಅದರಲ್ಲೂ ಈಗಿನ ಯುವ ಜನಾಂಗವು ಪಾಶ್ಚಿಮಾತ್ಯ ವಿದ್ಯಾಭ್ಯಾಸದ ಪ್ರಭಾವದಿಂದ, ನಮ್ಮ ಸನಾತನ ಧರ್ಮದ ವಿಚಾರಗಳನ್ನು ಧಾರ್ಮಿಕವಾಗಿ ಹೇಳಿದರೆ ನಂಬುವುದಿಲ್ಲ. ಈಗ, ವಿಜ್ಞಾನ ಯುಗ; ಯಾವುದೇ ಆಗಲಿ, ಈಗಿನ ವಿಜ್ಞಾನಕ್ಕೆ ಸರಿಹೊಂದುವ ಮತ್ತು ಈಗಿನ ವಿಜ್ಞಾನವನ್ನು ಮೀರಿಸುವ ರೀತಿಯಲ್ಲಿ ನಮ್ಮ ಮಹರ್ಷಿಗಳು ಹೇಳಿರುವುದನ್ನು ವಿವರಿಸಿದರೆ ಮಾತ್ರ ಈಗಿನ ಯುವ ಜನಾಂಗ ನಂಬುತ್ತಾರೆ. ನಮ್ಮ ಮಹರ್ಷಿಗಳು ಹೇಳಿರುವುದೆಲ್ಲವೂ ಸಹ ಈಗಿನ ವಿಜ್ಞಾನ ಏನು ಹೇಳುತ್ತೋ ಅದನ್ನೇ ಮತ್ತು ಅದಕ್ಕಿಂತ ಮಿಗಲಾದದ್ದನ್ನೂ ಸಹ ಹೇಳುತ್ತದೆಂಬುದನ್ನು ಆಧಾರ ಸಹಿತ ಧಾರಾಳವಾಗಿ ವಿವರಿಸಬಹುದು. ಇದನ್ನೇ ಪರಮಾರ್ಥವೆಂದು ಹೇಳಿರುವುದು. ಕಾಲ ಬದಲಾವಣೆಯಿಂದ ಈ ಪರಮಾರ್ಥವನ್ನು ವಿಶೇಷ ದೃಷ್ಟಿಯಿಂದ, ಅರ್ಥಾತ್ ವೈಜ್ಞಾನಿಕ ದೃಷ್ಟಿಯಿಂದ ಹೇಳಿದರೆ ಮಾತ್ರ ಸಂಪದ್ಭರಿತವಾದ ನಮ್ಮ ಸನಾತನ ಧರ್ಮವು ಉಳಿಯುತ್ತೆ.

ಕೆಲವು ಮಡಿವಂತ ವಿದ್ವಾಂಸರು ವಿಜ್ಞಾನಕ್ಕೂ ನಮ್ಮ ಧರ್ಮಕ್ಕೂ ಸಂಬಂಧವಿಲ್ಲ; ಏನೇ ಆಗಲಿ, ನಮ್ಮ ಮಹರ್ಷಿಗಳು ಹೇಳಿರುವುದನ್ನು ಚಾಚೂ ತಪ್ಪದೆ ಅನುಸರಿಸುವುದೇ ನಮ್ಮ ಕರ್ತವ್ಯ ಎಂದು ಹೇಳುತ್ತಾರೆ. ಇಂಥವರಿಗೆ ನನ್ನದೊಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣ ಪ್ರಶ್ನೆ; ಹಿಂದೆ ಮಠಾಧಿಪತಿಗಳು ಸನ್ಯಾಸಿಗಳು, [illegible] ಅಥವಾ [illegible]ನಾದಲ್ಲಿ ಸಂಚರಿಸಬೇಕಿತ್ತು. ಆದರೆ ಈಗ ಕಾರು, ರೈಲು, ವಿಮಾನ ಇತ್ಯಾದಿ ಸೌಕರ್ಯಗಳೇ ಬೇಕು. ಇದಕ್ಕೆ ನಮ್ಮ ಮಡಿವಂತ ವಿದ್ವಾಂಸರು ಏನು ಹೇಳುತ್ತಾರೆ ? ಇಲ್ಲಿ ಮೂಲಭೂತವಾದದ್ದು ಸಂಚಾರ ಕಾಲಕ್ಕನುಗುಣವಾಗಿ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಸಂಚಾರ ಮಾಡಿದರೆ ತಪ್ಪೇನಿಲ್ಲ. ಅದೇ ರೀತಿ ನಮ್ಮ ಮಹರ್ಷಿಗಳು ಹೇಳಿರುವುದನ್ನು ಮೂಲಭೂತಕ್ಕೆ ಚ್ಯುತಿ ಬರದಂತೆ ಕಾಲಕ್ಕನುಗುಣವಾಗಿ ಈಗಿನ ವಿಜ್ಞಾನದ ಜಾಡಿನಲ್ಲೇ ಹೇಳಿದರೆ ತಪ್ಪೇನು ?

ರಾಮಾಯಣ ಮತ್ತು ಮಹಾಭಾರತ -ಇವುಗಳಲ್ಲಿ ಬರುವ ಸನ್ನಿವೇಶಗಳ ಪರಮಾರ್ಥವನ್ನೇ ನಮ್ಮ ವಿದ್ವಾಂಸರು ಚಿಂತನೆ ಮಾಡಿಲ್ಲವೆಂದರೆ ತಪ್ಪಾಗಲಾರದು. ಇಲ್ಲಿ ಕೇವಲ ಒಂದೆರಡು ಉದಾರಹರಣೆ ಕೊಟ್ಟರೆ ಸಾಕು.

ಮಹಾಭಾರತದಲ್ಲಿ ದ್ರೌಪದಿ ಸ್ವಯಂವರ ಸನ್ನಿವೇಶದಲ್ಲಿ ಲಕ್ಷ್ಯವನ್ನು ಭೇದಿಸಿ ದ್ರೌಪದಿಯನ್ನು ಪಡೆದು, ಪಾಂಡವರು ಮನೆಗೆ ಬರುತ್ತಿದ್ದ ಹಾಗೆ ಒಳಗೆ ಇದ್ದ ತಾಯಿಯಾದ ಕುಂತಿಯನ್ನು ಕುರಿತು "ಅಮ್ಮಾ ಇದೇ ಇಂದಿನ ಭಿಕ್ಷೆ " ಎಂದು ಹೇಳಿದರು. ಒಳಗಿದ್ದ ಕುಂತಿಯು ಈ ಭಿಕ್ಷೆಯನ್ನು ಸಮವಾಗಿ ಹಂಚಿಕೊಳ್ಳಿ ಎಂದು ಹೇಳಿ, ಹೊರಗೆ ಬಂದು ನೋಡಿದಾಗ ಆ ಭಿಕ್ಷೆಯು ದ್ರೌಪದಿಯಾಗಿದ್ದಳು. ತಾಯಿಯ ವಚನದಂತೆ ಐವರು ಸಹೋದರರು ದ್ರೌಪದಿಯನ್ನು ವಿವಾಹವಾದರು ಎಂದು ಹೇಳಲ್ಪಟ್ಟಿದೆ. ಆದರೆ ಅದೇ ಸನ್ನಿವೇಶದಲ್ಲಿ ಮನೆಗೆ ಬಂದ ಸೊಸೆಗೆ (ದ್ರೌಪದಿಗೆ) ಅತ್ತೆಯಾದ ಕುಂತಿಯು ಮನೆ ನಡವಳಿಕೆ ಈ ರೀತಿ ಹೇಳಿಕೊಡುತ್ತಾಳೆ. "ಶುಭಾಂಗಿ, ಇವರು ತಂದಿಟ್ಟಿರುವ ಭಿಕ್ಷಾನ್ನವನ್ನೆಲ್ಲಾ ಒಟ್ಟಾಗಿ ಸೇರಿಸು; ಮೊದಲು ದೇವತೆಗಳಿಗೆ ಬಲಿಯಿಡು; ಬ್ರಾಹ್ಮಣರಿಗೆ ಭಿಕ್ಷೆ ನೀಡು; ಮತ್ಯಾರಾದರೂ ಅತಿಥಿಗಳು ಬಂದರೆ ಅವರಿಗೆ ಭೋಜನ ಮಾಡಿಸು, ಇವೆಲ್ಲವೂ ಆದ ನಂತರ ಉಳಿದ ಭಿಕ್ಷೆಯನ್ನು ಎರಡು ಭಾಗಗಳನ್ನಾಗಿ ಮಾಡಿ, ಅದರಲ್ಲಿ ಒಂದು ಭಾಗವನ್ನು ಮದಗಜದಂತೆ ಪುಷ್ಟನಾಗಿಯೂ ಸುಂದರನಾಗಿಯೂ ಇರುವ ನನ್ನ ಎರಡನೆ ಮಗನಿಗೆ (ಭೀಮನಿಗೆ) ಕೊಡು; ಉಳಿದ ಭಾಗವನ್ನು ಆರು ಭಾಗಗಳನ್ನಾಗಿ ಮಾಡು. ಅದನ್ನು ನಾವು ಆರು ಮಂದಿಯೂ ತೆಗೆದುಕೊಳ್ಳೋಣ" (ಮಹಾಭಾರತ, ಆದಿಪರ್ವ 192ನೇ ಅಧ್ಯಾಯ)

ಮೊದಲು ಸಮವಾಗಿ ಹಂಚಿಕೊಳ್ಳಿ ಎಂದು ಕುಂತಿ ಕೈಲಿ ಹೇಳಿಸಿದ ವೇದವ್ಯಾಸರೇ, ನಂತರ ಈ ರೀತಿ ಭಿಕ್ಷೆಯನ್ನು ಹಂಚಿಕೊಳ್ಳುವಂತೆ ಹೇಳಿಸಿದ್ದಾರೆ. ವೇದವ್ಯಾಸರೇ, ಈ ಎರಡು ವಿರೋಧವಾದ ಹೇಳಿಕೆಗಳನ್ನು ಏಕೆ ಹೇಳಿದ್ದಾರೆ ? ಇವರ ಪರಮಾರ್ಥವೇನು ? ಇದೇ ರೀತಿ ಇನ್ನೊಂದು ಉದಾರಹಣೆ: ದ್ರೌಪದಿ ವಸ್ತ್ರಾಪಹರಣದ ಸನ್ನಿವೇಶದಲ್ಲಿ, ದುರ್ಯೋಧನನು ದ್ರೌಪದಿಗೆ ಅವಮಾನ ಮಾಡುವ ಉದ್ದೇಶದಿಂದ, ಅವಳನ್ನು ನಿರ್ವಸ್ತ್ರ ಮಾಡೆಂದು ದುಶ್ಶಾಸನನಿಗೆ ಆಜ್ಞೆ ಮಾಡಿದನು. ಆಗ ದ್ರೌಪದಿಯು ಶ್ರೀ ಕೃಷ್ಣನ ಮೊರೆ ಹೋದಳು. ದುಶ್ಶಾಸನನು, ಆಕೆಯ ಸೀರೆಯನ್ನು ಎಳೆದ ಹಾಗೆಲ್ಲಾ, ಅದು ಅಕ್ಷಯವಾಯಿತೆಂದು ಶ್ರೀ ವೇದವ್ಯಾಸರು ವರ್ಣನೆ ಮಾಡಿದ್ದಾರೆ. ನಂತರ, ಪಾಂಡವರು ವನವಾಸಕ್ಕೆ ಬಂದ ಮೇಲೆ, ಶ್ರೀ ಕೃಷ್ಣನು, ಅವರನ್ನು ವಿಚಾರಿಸಿಕೊಳ್ಳುವುದಕ್ಕೆ ಅವರಲ್ಲಿಗೆ ಬಂದಾಗ ದ್ರೌಪದಿಯು, ಶ್ರೀಕೃಷ್ಣನ ಸಂಗಡ, ದುರ್ಯೋಧನನು ತನಗೆ ಮಾಡಿದ ಅವಮಾನದ ಬಗ್ಗೆ ಪ್ರಲಾಪ ಮಾಡುತ್ತಾಳೆ. ಆಗ ಶ್ರೀಕೃಷ್ಣನು ಈ ರೀತಿ ಆಕೆಗೆ ಸಮಾಧಾನ ಹೇಳುತ್ತಾನೆ; ಅಮ್ಮ ನಿನ್ನನ್ನು ಅವಮಾನ ಮಾಡುವ ಕಾಲದಲ್ಲಿ ನಾನು ಪಟ್ಟಣದಲ್ಲಿರಲಿಲ್ಲ,



Sri Vidyabharathi Book Centre, Sringeri

CC-0. In Public Domain. Digitized by eGangotri

(ದ್ವಾರಕೆಯಲ್ಲಿ [illegible] ಸಂಹಾರ ಮಾಡುವುದಕ್ಕೆ ಹೋಗಿದ್ದೆ. ಆದ್ದರಿಂದ ಈ ವಿಷಯ, ನನಗೆ ತಿಳಿಯಲಿಲ್ಲ. ಶಾಲ್ವನನ್ನು ಸಂಹಾರ ಮಾಡಿ ದ್ವಾರಕೆಗೆ ವಾಪಸ್ಸು ಬಂದ ನಂತರ, ವಿಷಯ ತಿಳಿಯಿತು. ನಿನಗೆ ಸಮಾಧಾನ ಮಾಡುವ ಸಲುವಾಗಿ ಈಗ ಬಂದೆ. ಒಂದು ವೇಳೆ, ದ್ಯೂತದ ವಿಷಯ ನನಗೆ ಮೊದಲೇ ತಿಳಿದಿದ್ದರೆ, ದುರ್ಯೋಧನನಿಗೂ ಮತ್ತು ಧೃತರಾಷ್ಟ್ರನಿಗೂ, ದ್ಯೂತವಾಡಬಾರದು ಎಂದು ಬುದ್ಧಿವಾದ ಹೇಳುತ್ತಿದ್ದೆ. ನನ್ನ ಮಾತನ್ನು ಅವರುಗಳು ಮೀರಿದ್ದರೆ ಅವರನ್ನೇ ಸಂಹಾರ ಮಾಡುತ್ತಿದ್ದೆ" ಎಂದು ದ್ರೌಪದಿಗೆ ಸಮಾಧಾನ ಹೇಳುತ್ತಾನೆ. ಇದನ್ನು ಸಹ ಶ್ರೀ ವೇದವ್ಯಾಸರೇ ಬರೆದಿದ್ದಾರೆ. ಇದು ವಿರೋಧಾಭಾಸವಾಗಲಿಲ್ಲವೇ? ಇದರ ಪರಮಾರ್ಥವೇನು? (ವನಪರ್ವ 13ನೇ ಅಧ್ಯಾಯ). ಇಂಥಾ ಸನ್ನಿವೇಶಗಳು ಭಾಗವತ, ಮಹಾಭಾರತ ಮತ್ತು ರಾಮಾಯಣಗಳಲ್ಲಿ ಅನೇಕವಿವೆ. ಇವುಗಳ ಪರಮಾರ್ಥವನ್ನು ತಿಳಿದುಕೊಳ್ಳದೆ, ಕೇವಲ ಮೇಲ್ನೋಟಕ್ಕೆ ತೋರುವ ಧಾರ್ಮಿಕ ಅರ್ಥವನ್ನು ಹೇಳಿದರೆ, ಶ್ರೀ ವೇದವ್ಯಾಸರೇ ಹೇಳಿರುವಂತೆ ಅವೆಲ್ಲಾ ಕಾಕಭಾಷೆಯಾಗುತ್ತೆ. ಶ್ರೀ ವೇದವ್ಯಾಸರು ಹೇಳಿರುವಂತೆ ಪರಮಾರ್ಥವನ್ನು ತಿಳಿದುಕೊಳ್ಳದೆ, ಕೇವಲ ಧಾರ್ಮಿಕವಾಗಿ ನಮ್ಮ ವಿದ್ವಾಂಸರು ಹೇಳುತ್ತಿರುವುದರಿಂದಲೇ, ನಮ್ಮ ಸಂಪದ್ಭರಿತ ಸನಾತನ ಸಂಸ್ಕೃತಿ ಹೀನಸ್ಥಿತಿಗೆ ಬರುತ್ತಿದೆ. ಈ ಸತ್ಯವನ್ನು ಸಹ ನಾವು ಪಾಶ್ಚಿಮಾತ್ಯರಿಂದಲೇ ತಿಳಿದುಕೊಳ್ಳುವ ಕಾಲ ಬಂದಿರುವುದು ನಮ್ಮ ದುರ್ದೈವವಲ್ಲವೇ ? ದಯವಿಟ್ಟು ಇದನ್ನು ನೋಡಿ :

## RITUALS ON DECLINE

Vedic rituals practised daily or on special occasions in Brahmin homes in Kerala and Tamilnad, are fast diclining, according to a research study. **Dr. Asko Parpola**, Professor of Indology at Helsinki University in Finland, who had been doing research in Vedas and ancient Indian Civilization for the past 20 years, told U.N.I. in an interview that some of the rituals had been altogether dropped, some others had been cut short . (P.T.I.) (DH, 14-1-85)

## ಧರ್ಮಾಚರಣೆಯ ಅವನತಿ

'ಬ್ರಾಹ್ಮಣರು ಪ್ರತಿನಿತ್ಯವೂ ಮತ್ತು ಕೆಲವು ನಿರ್ದಿಷ್ಟ ಕಾಲಗಳಲ್ಲೂ ಆಚರಿಸುವ ಧರ್ಮಾಚರಣೆಗಳು ಕೇರಳ ಮತ್ತು ತಮಿಳು ನಾಡಿನಲ್ಲಿ ಅವನತಿಗೆ ಬರುತ್ತಿದೆ. ಫಿನ್ಲೆಂಡ್ ದೇಶದ ಹೆಲ್ಸಿಂಕಿ ವಿಶ್ವವಿದ್ಯಾನಿಲಯದಲ್ಲಿ ಇಂಡಾಲಜಿ ಪ್ರೊಫೆಸರ್ ಡಾ॥ ಆಸ್ಕೋ ಪರ್ಪೋಲ ಎಂಬುವವರು, ವೇದ ಮತ್ತು ಪ್ರಾಚೀನ ಭಾರತದ ನಾಕರಿಕತೆಯ ವಿಷಯವಾಗಿ, ಕಳೆದ 20 ವರ್ಷಗಳ ಸಂಶೋಧನೆಯಿಂದ ಕಂಡುಕೊಂಡ ಈ ಸತ್ಯವನ್ನು ಯು. ಎನ್.ಐ. ಸಂಸ್ಥೆಗೆ ಹೇಳಿದ್ದಾರೆ. ಅದರ ಪ್ರಕಾರ, ಕೆಲವು ಆಚರಣೆಗಳು ಪೂರ್ತಿ ಬಿಟ್ಟು, ಬಿಟ್ಟು ಕೆಲವನ್ನು ಮಾತ್ರ ಸಂಕ್ಷೇಪವಾಗಿ ಆಚರಿಸಲಾಗುತ್ತಿದೆ. (ಕೇರಳ ಮತ್ತು ತಮಿಳುನಾಡಿಗೆ ಸಂಬಂಧಿಸಿದ್ದು, ಕರ್ನಾಟಕಕ್ಕೂ ಅನ್ವಯಿಸುತ್ತದೆಯಲ್ಲವೆ ? ಲೇಖಕ)

ಈ ರೀತಿಯ ಅವನತಿಗೆ ಮುಖ್ಯ ಕಾರಣ, ಈ ಕೆಳಗೆ ಕೊಟ್ಟಿರುವ ಹೇಳಿಕೆಯೇ ಸಾಕ್ಷಿ:

"................With the improved economic conditions and greater education and the huge impact of western culture and way of life, the

Sri Vidyabharathi Book Centre, Sringeri

CC-O. In Public Domain. Digitized by eGangotri

radio and the T.V. and the contact with other race groups, the youth and the thinking people are questioning the validity and blind beliefs and customs and ceremonies of the older generation.... We are aware of the publications of the Ramakrishna Vedantha Movement, Divine Life Society, Bharathiya Vidya Bhavan and Arobindo Ashrama, but they all lack the simple practical approach.

**Dayabhai Hari**
for Ramakrishna Vedantha Society,
Johannesburg (S. Africa) **(DH. 16 -1- 85)**

(ಆರ್ಥಿಕವಾಗಿ ಮುಂದುವರಿದ ಉಚ್ಛ ವಿದ್ಯಾಭ್ಯಾಸದ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಮತ್ತು ರೇಡಿಯೋ, ಟಿ.ವಿ. ಇವುಗಳ ಪ್ರಭಾವದ ಹಾಗೂ ,ಇತರ ಜನಾಂಗಗಳ ಸಂಪರ್ಕದಿಂದುಂಟಾದ ಪ್ರಭಾವದ, ಈಗಿನ ಯುವಕರು ಮತ್ತು ವಿಚಾರ ಪರಿಶೀಲಕರು, ಸನಾತನ ಧರ್ಮಾಚರಣೆಗಳನ್ನೂ ಮತ್ತು ಅವುಗಳಲ್ಲಿರುವ ನಂಬಿಕೆಗಳನ್ನೂ ಪ್ರಶ್ನಿಸುತ್ತಿದ್ದಾರೆ. ರಾಮಕೃಷ್ಣ- ವಿವೇಕಾನಂದ ಸಂಸ್ಥೆ, ದಿವ್ಯ ಜೀವನ ಸಂಘ, ಭಾರತೀಯ ವಿದ್ಯಾಭವನ ಮತ್ತು ಅರವಿಂದ ಆಶ್ರಮ ಈ ಸಂಸ್ಥೆಗಳಿಂದ ಪ್ರಕಟವಾಗುವ ಪ್ರಚಾರ ಪುಸ್ತಕಗಳು ಸುಲಭ ರೀತಿಯಲ್ಲಿ ಅರ್ಥವಾಗುತ್ತಿಲ್ಲ)

ಈಗಿನ ಕಾಲಕ್ಕೆ ತಕ್ಕಂತೆ ನಮ್ಮ ಸನಾತನ ಧರ್ಮಾಚರಣೆಗಳನ್ನು ವೈಜ್ಞಾನಿಕವಾಗಿ ಚಿಂತನ ಮಾಡದಿರುವುದೇ ಈ ಅವನತಿಗೆ ಮುಖ್ಯ ಕಾರಣ. ಇನ್ನಾದರೂ ನಮ್ಮ ಮಠಾಧಿಪತಿಗಳು, ವಿದ್ವಾಂಸರು ಮತ್ತು ಸಂಘ ಸಂಸ್ಥೆಗಳು ಎಚ್ಚೆತ್ತು ಈ ದಿಶೆಯಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ನಮ್ಮ ಯುವಜನಾಂಗಕ್ಕೆ ಮಾರ್ಗದರ್ಶನ ತೋರಲಿ ಎಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ವಿಚಾರವಾದಿಗಳ ಬಗ್ಗೆ ಎರಡು ಮಾತು ಹೇಳಲೇ ಬೇಕು. ವಿಚಾರ ಮಾಡಿದರೆ ಮಾತ್ರ ಯಾವುದೊಂದರ ಪರಮಾರ್ಥ ತಿಳಿಯುತ್ತೆ. ಆದರೆ, ಸ್ವತಃ ವಿಚಾರ ಮಾಡದೆ ವಿಚಾರ ಮಾಡುವವರಿಗೆ ಅವಕಾಶ ಕೊಡದೆ ಕೇವಲ ಪಾಶ್ಚಿಮಾತ್ಯ ವಿಚಾರ ಧಾರೆಗೆ ಶರಣು ಹೋಗಿ ನೋಬಲ್ ಪಾರಿತೋಷಕ ವಿಜ್ಞಾನಿಗಳು ಹೇಳುವುದು ಮಾತ್ರ ಸತ್ಯ, ಉಳಿದದ್ದೆಲ್ಲಾ ಮಿಥ್ಯಾ ಎಂದು ಕುಣಿಯುವ ಗುಡ್ಡರಂತೆ ನರ್ತಿಸುವ ಬದಲು, ದೇವರು ಕೊಟ್ಟಿರುವ ಬುದ್ಧಿಯನ್ನು ಉಪಯೋಗಿಸಿ ಚಿಂತನೆ ಮಾಡಿ ಸತ್ಯವನ್ನು ಅರ್ಥಾತ್ ಪರಮಾರ್ಥವನ್ನು ತಿಳಿದು ಯುವ ಜನಾಂಗಕ್ಕೆ ಮಾರ್ಗದರ್ಶಕರಾಗಲಿ ಎಂಬುದೇ ನನ್ನ ಸವಿನಯ ಪ್ರಾರ್ಥನೆ.

ಈ ಸಂದರ್ಭದಲ್ಲಿ ಮೊದಲನೇ ಅಣುಬಾಂಬನ್ನು ತಯಾರು ಮಾಡಿದ ರಾಬರ್ಟ್ ಓಪ್ಪನೇಮರ್ ಎಂಬ ವಿಜ್ಞಾನಿ ಹೇಗೆ ನಮ್ಮ ಪ್ರಾಚೀನ ಭಾರತದಲ್ಲಿದ್ದ ಅಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಿ ಮೊದಲನೇ ಅಣುಬಾಂಬನ್ನು ತಯಾರು ಮಾಡಿದ ಎಂಬ ವಿಚಾರ ಅವನ ಚರಿತ್ರೆಯಿಂದ ತಿಳಿಯುತ್ತೆ. ನಮ್ಮ ವಿಜ್ಞಾನಿಗಳು ಅವನ ರೀತಿಯಲ್ಲೇ ನಮ್ಮ ಪ್ರಾಚೀನ ಭಾರತದ ಸಂಸ್ಕೃತಿಯನ್ನು ಅಧ್ಯಯನ ಮಾಡಿ, ವೈಜ್ಞಾನಿಕವಾಗಿ ವಿಶ್ಲೇಷಣೆ ಏಕೆ ಮಾಡಬಾರದು? ಇದನ್ನು ಮಾಡುವುದಕ್ಕೂ ಪಾಶ್ಚಿಮಾತ್ಯ ವಿಜ್ಞಾನಿಗಳೇ ಬರಬೇಕೆ?



Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕೃತ ಈ ಪುಸ್ತಕದಲ್ಲಿ ಮೊದಲನೇ ಲೇಖನ 'ಶೇಷಶಾಯಿ' ಎಂಬುದರ ಪರಮಾರ್ಥವನ್ನು ವಿಶ್ಲೇಷಿಸಿದ್ದೇನೆ. 7,5,3 ಹೆಡೆ ಸರ್ಪದ ಪರಮಾರ್ಥವನ್ನು ವೈಜ್ಞಾನಿಕವಾಗಿ ವಿವರಿಸಲಾಗಿದೆ. ನಮ್ಮ ದೇಹ ರಚನೆಯನ್ನು ನಮ್ಮ ಮಹರ್ಷಿಗಳು ಎಷ್ಟು ಆಳವಾಗಿ ಈಗಿನ ಯಾವ ಸೌಕರ್ಯವೂ ಇಲ್ಲದ ಕಾಲದಲ್ಲಿ ಅಧ್ಯಯನ ಮಾಡಿದ್ದರು ಎಂಬುದು ಈ ಲೇಖನದಿಂದ ಗೊತ್ತಾಗುತ್ತೆ. ಇದು ಈಗಿನ ಒಂದು ವಿಜ್ಞಾನಕ್ಕೆ ಸವಾಲಲ್ಲವೇ?

ಎರಡನೇ ಲೇಖನ - 'ನಾಗಪಂಚಮಿ' (ಗರುಡ ಪಂಚಮಿ) ಆಚರಣೆಯ ಪರಮಾರ್ಥವನ್ನು ತಿಳಿದು ಕೊಂಡರೆ, ನಮ್ಮ ಆರೋಗ್ಯಕ್ಕೆ (ದೈಹಿಕ ಮತ್ತು ಮಾನಸಿಕ ಆರೋಗ್ಯ) ಈ ಆಚರಣೆಯನ್ನು ನಿಯಮ ಮಾಡಿದ್ದಾರೆಂಬುದು ಅರ್ಥವಾಗುತ್ತೆ. ಅಲ್ಲದೆ ಮಾನವನು ಯಾವ ರೀತಿ ವಿಶ್ವ ಕುಟುಂಬಿಯಾಗಿ ಬಾಳ ಬೇಕೆಂಬುದರ ಪರಮಾರ್ಥವನ್ನು ಸೂಚಿಸುತ್ತದೆ. ಅಂದರೆ ವಿಶ್ವಭ್ರಾತೃತ್ವದ ಬದುಕನ್ನು ಅಪರೋಕ್ಷವಾಗಿ ಹೇಳುತ್ತೆ. ಈ ಆಚರಣೆಯಲ್ಲಿ ಪ್ರಾಣಿ ಶಾಸ್ತ್ರ (Zoology), ಖಗೋಳಶಾಸ್ತ್ರ (Astronomy), ಶರೀರ ಶಾಸ್ತ್ರ (Physiology), ಆರೋಗ್ಯ ಶಾಸ್ತ್ರ (Health), ಆಹಾರ ಶಾಸ್ತ್ರ (Dietitics) ,ಪ್ರಕೃತಿ ಚಿಕಿತ್ಸೆ (Nature Cure), ಸಮಾಜ ಶಾಸ್ತ್ರ (Sociology), ಜ್ಯೋತಿಷ್ಯ ಶಾಸ್ತ್ರ (Astrology), ಹವಾಮಾನ ಶಾಸ್ತ್ರ (Metereology), ಆಯುರ್ವೇದ ಇತ್ಯಾದಿಗಳಲ್ಲಿ ನಮ್ಮ ಮಹರ್ಷಿಗಳು ಎಷ್ಟು ಮುಂದುವರೆದಿದ್ದರು ಎಂಬುದು ಅರ್ಥವಾಗುತ್ತೆ.

ಇಂಥ ರಚನಾತ್ಮಕವಾದ ಮತ್ತು ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನು ಎತ್ತಿ ತೋರಿಸುವ ಸಾಹಿತ್ಯ ಈಗಿನ ಕಾಲಕ್ಕೆ ಅತ್ಯಾವಶ್ಯಕವಾಗಿದೆ. ಈಗ ಕೇವಲ ಕಾಂತಾ ಸಮ್ಮಿತ ಸಾಹಿತ್ಯವೆನಿಸಿರುವ ಕಥೆ, ಕಾದಂಬರಿ, ನಾಟಕ - ಇತ್ಯಾದಿಗಳಿಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳಿಂದ ದೊರಕುತ್ತಿರುವ ಉತ್ತೇಜನ (ಧನರೂಪವಾಗಿ) ಈ ರೀತಿಯ ನಮ್ಮ ಸನಾತನ ಸಂಸ್ಕೃತಿಯನ್ನು ಜನ ಸಾಮಾನ್ಯರಿಗೆ ಈಗಿನ ಕಾಲಕ್ಕೆ ತಕ್ಕಂತೆ ಸುಲಭವಾಗಿ ತಿಳಿಹೇಳುವ ಸಾಹಿತ್ಯಕ್ಕೆ ದೊರಕುತ್ತಿಲ್ಲ. ಇದು ನಮ್ಮ ದುರದೃಷ್ಟವಲ್ಲವೇ?

"ಧಿಯೋ ಯೋ ನಃ ಪ್ರಚೋದಯಾತ್"

ನನ್ನ ಪೂಜ್ಯ ತಂದೆಯವರಾದ ಶ್ರೀ ಎಚ್. ಕೆ. ಎಸ್. ರಾವ್ ರವರು ದಿನಾಂಕ 20-1-1997ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಈ ಪುಸ್ತಕವು ಎರಡನೆಯ ಮುದ್ರಣವನ್ನು ಕಾಣುತ್ತಿರುವುದು ಸಂತೋಷವಾಗಿದೆ. ಮತ್ತೊಂದು ಕಡೆ ಅವರ ಅಗಲಿಕೆ ನಮ್ಮನ್ನು ದುಃಖ ಪೀಡಿತರನ್ನಾಗಿ ಮಾಡಿದೆ.

ಮಾನ್ಯ ವಾಚಕರು ನನ್ನ ತಂದೆಯವರಿಗೆ ಕೊಡುತ್ತಿದ್ದ ಸಹಕಾರವನ್ನು ನನಗೂ ಕೊಟ್ಟು ಸಹಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಎರಡನೆಯ ಮುದ್ರಣವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟ ರಮ್ಯ ಉದ್ಯಮದ ಮಾಲೀಕರಾದ ಶ್ರೀ ಬಿ. ಎನ್. ಸೀತಾರಾಂ ಮತ್ತು ಸಹೋದರರಿಗೆ ನನ್ನ ವಂದನೆಗಳು.

ಎಂ. ಎಸ್. ಚಕ್ರಪಾಣಿ

Sri Vidyabharathi Book Centre, Sringeri

CC-O. In Public Domain. Digitized by eGangotri



## ಶ್ರೀ ಎಚ್. ಕೆ. ಎಸ್. ರಾವ್

ಜನನ : 09-11-1907 ನಿಧನ : 20-1-1997

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

# ಶೇಷಶಾಯಿ

## (ವೈಜ್ಞಾನಿಕ ದೃಷ್ಟಿಯಲ್ಲಿ)

ಶೇಷಶಾಯಿ ಅಂದರೆ, ಹಾವಿನ ಮೇಲೆ ಮಲಗಿರುವವನು - ಅರ್ಥಾತ್ ವಿಷ್ಣು ಎಂದರ್ಥ. ಶೇಷನಿಗೆ ಆದಿಶೇಷ ಎಂದರು. ಆದಿಶೇಷನಿಗೆ ಏಳು ಹೆಡೆಗಳಿವೆ ಎಂದು ಪುರಾಣ ಹೇಳುತ್ತೆ. ಕೆಲವು ಕಡೆ 3 ಹೆಡೆ ಮತ್ತು 5 ಹೆಡೆಗಳಿಂದಲೂ ಶೇಷವನ್ನು ವರ್ಣಿಸಲಾಗಿದೆ. ಶೇಷ ಎಂದರೆ ಸಾಮಾನ್ಯ ಅರ್ಥ ಸರ್ಪ ಎಂದು. ಈಗ ನಾವು ಕೇವಲ ಒಂದು ಹೆಡೆ ಸರ್ಪವನ್ನು ಮಾತ್ರ ನೋಡುತ್ತಿದ್ದೇವೆ. 3. 5 ಅಥವಾ 7 ಹೆಡೆಯ ಸರ್ಪಗಳು ( ನಾಗರ ಹಾವುಗಳು) ಪ್ರಪಂಚದಲ್ಲಿ ಎಲ್ಲೂ ಅಸ್ತಿತ್ವದಲ್ಲಿಲ್ಲ. ಮತ್ತು ಇವುಗಳ ಅವಶೇಷಗಳು ಸಹ (fossils) ಎಲ್ಲೂ ದೊರಕಿಲ್ಲ. ಹಾಗಾದರೆ ಈ 3. 5, 7 ಹೆಡೆಗಳ ಪರಮಾರ್ಥವೇನು ? ಮತ್ತು ವಿಷ್ಣುವು ಈ 7 ಹೆಡೆಯ ಸರ್ಪದ ಮೇಲೆ ಮಲಗಿರುವ ಅಂತರಾರ್ಥವೇನು ? ಅವನಿಗೆ ಬೇರೆ ಹಾಸಿಗೆಯೇ ಸಿಕ್ಕಲಿಲ್ಲವೇ ? ವೈಕುಂಠವಾಸಿ ಎಂದ ಮೇಲೆ ಕ್ಷೀರಸಾಗರ ವಾಸಿ ಏಕಾದ ?

ಆದಿ ಎಂದರೆ ಮೊದಲು, ಪ್ರಾರಂಭ, ಮೂಲ - ಇತ್ಯಾದಿ ನಿಘಂಟಿನ ಅರ್ಥ. ಶೇಷ ಎಂದರೆ ಉಳಿದುದು, ಬಾಕಿ, ಪ್ರಸಾದ ಇತ್ಯಾದಿ ನಿಘಂಟಿನ ಅರ್ಥ. ವಿಷ್ಣು ಎಂದರೆ ಸಾವಿರಾರು ಅರ್ಥವಿದೆ. (ವಿಷ್ಣು ಸಹಸ್ರನಾಮದ ಪ್ರಕಾರ). ಇದರಲ್ಲಿ ವಿಶ್ವ ಎಂತಲೂ ಒಂದು. ವಿಶ್ವ ಎಂದರೆ ಬ್ರಹ್ಮಾಂಡ ಮತ್ತು ವಿಷ್ಣುವಿಗೆ **'ಶಕ್ತಿಮಂತಾಂ ಶ್ರೇಷ್ಠಾಯ ನಮಃ'** ಎಂದು ಕರೆಯಲಾಗಿದೆ; ಅಂದರೆ ಶ್ರೇಷ್ಠವಾದ ಶಕ್ತಿ ಎಂದು.

ಬ್ರಹ್ಮಾಂಡದಲ್ಲಿ ಒಂದು ಶ್ರೇಷ್ಠವಾದ ಶಕ್ತಿ ಉಂಟಾಯಿತು ಮತ್ತು ಹೇಗೆ ಉಂಟಾಯಿತು ಎಂಬುದನ್ನು ಸೂಚಿಸುವುದೇ ಆದಿಶೇಷ ಮತ್ತು ಇದರ ಉಗಮಸ್ಥಾನವೇ ವಿಷ್ಣು (ಶೇಷಶಾಯಿ) ಅರ್ಥಾತ್, ಬ್ರಹ್ಮಾಂಡದಲ್ಲಿನ ಶ್ರೇಷ್ಠವಾದ ಶಕ್ತಿಯು (ಅಂದರೆ ವಿಷ್ಣುವು), ಮಾನವನಿಗೆ ಅನುಗ್ರಹ ಮಾಡಿದ ಮೊದಲ (ಅಂದರೆ ಆದಿ) ಪ್ರಸಾದ (ಅಂದರೆ ಶೇಷ). ಈ ಶಕ್ತಿ ಸದಾ ಉಂಟಾಗುತ್ತಿರಬೇಕು. ಮತ್ತು ಸದಾಕಾಲವೂ ಇರಬೇಕು. ಈ ಶಕ್ತಿಯೇ ಬ್ರಹ್ಮಾಂಡವೆಲ್ಲವನ್ನು ಆವರಿಸಿಕೊಂಡಿರುವುದು. ಬ್ರಹ್ಮಾಂಡದಲ್ಲಿ, ಅದರಲ್ಲೂ ಬ್ರಹ್ಮಾಂಡದಲ್ಲಿ ಒಂದಾದ ಈ ಪೃಥ್ವಿಯಲ್ಲಿರುವ ಎಲ್ಲಾ ಚರಾಚರವಸ್ತುಗಳೂ, ಪ್ರಾಣಿ ವರ್ಗಗಳೂ ಮನುಷ್ಯವರ್ಗವೂ ಮತ್ತು ಪ್ರಕೃತಿಯಲ್ಲಿರುವ ಎಲ್ಲಾ ವಸ್ತುಗಳೂ ಈ ಶ್ರೇಷ್ಠವಾದ ಶಕ್ತಿಯಿಂದ (super humen force),



Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾಕಾಲವೂ ನಿಯಂತ್ರಿಸಲ್ಪಡುತ್ತಲೇ ಇರಬೇಕು. ಈ ಶಕ್ತಿ ಇಲ್ಲದಿದ್ದರೆ ನಮ್ಮ ಪೃಥ್ವಿ ಮೊದಲ್ಗೊಂಡು ಬ್ರಹ್ಮಾಂಡದಲ್ಲಿರುವ ಎಲ್ಲಾ ವಸ್ತುಗಳೂ ಒಂದು ಕ್ಷಣ ಮಾತ್ರವೂ ಅಸ್ತಿತ್ವದಲ್ಲಿರುವುದಕ್ಕಾಗುವುದಿಲ್ಲ. ಈ ಶಕ್ತಿಯನ್ನೇ ವಿಷ್ಣು ಅರ್ಥಾತ್ ಸ್ಥಿತಿಗೆ ಕಾರಣವಾದ ಶಕ್ತಿ ಎಂದರು. ಈ ದೃಷ್ಟಿಯಿಂದಲೇ ವಿಷ್ಣುಸಹಸ್ರನಾಮದಲ್ಲಿ 'ಶಕ್ತಿ ಮಂತಾಂ ಶ್ರೇಷ್ಠಾಯ ನಮಃ ' ಎಂದು ಕರೆಯಲಾಗಿದೆ.

ಒಂದು ಶಕ್ತಿ ಉಂಟಾಗಬೇಕಾದರೆ Positive ಮತ್ತು Negative ಎಂಬ ಎರಡು ಪ್ರತ್ಯೇಕ ಶಕ್ತಿಗಳು ಬೇಕು. ( ಉದಾರಹಣೆ ವಿದ್ಯುಚ್ಛಕ್ತಿ). ಲೌಕಿಕವಾಗಿ ಹೇಳಬೇಕಾದರೆ, ಚಪ್ಪಾಳೇ ಹೊಡೆಯುವುದಕ್ಕೆ ಹೇಗೆ ಎರಡು ಕೈಗಳು ಬೇಕೋ, ಹಾಗೆಯೇ ಪ್ರಪಂಚದಲ್ಲಿ ಯಾವುದೇ ಆಗಲೀ ಎರಡು ಕ್ರಿಯೆಗಳಿಂದಲೇ ಆಗಬೇಕು. ಆಕಾಶದಿಂದ ಬೀಳುವ ಮಳೆ ನೀರು ಪುನಃ ಆವಿಯಾಗಿ ಆಕಾಶಕ್ಕೇ ಹೋದರೆ ತಾನೆ ಪುನಃ ಮಳೆ ಬೀಳುವುದು. ಇದನ್ನೇ Action & Reaction ಎಂದರು. ಜನನವಾದ ಮೇಲೆ ಮರಣವಾಗಲೇಬೇಕು. ' ಜಾತಸ್ಯ ಹಿ ಮರಣಂ ಧ್ರುವಂ' ಎಂದು. ಈ ದೃಷ್ಟಿಯಿಂದಲೇ ಶ್ರೀ ಆದಿ ಶಂಕರಾಚಾರ್ಯರು, ' ಪುನರಪಿ ಜನನಂ ಪುನರಪಿ ಮರಣಂ....... ಇತ್ಯಾದಿಯಾಗಿ ಹೇಳಿರುವುದು. ಎಲ್ಲಿಯವರೆಗೆ ಈ ಎರಡು ಕ್ರಿಯೆಗಳು ಇರುತ್ತವೆಯೋ ಅಲ್ಲಿಯವರೆಗೆ ಈ ಪ್ರಪಂಚ ಇರುತ್ತೆ. ಈ ಎರಡು ಕ್ರಿಯೆಗಳೇ ಪರಮಾತ್ಮ. ಈ ದೃಷ್ಟಿಯಿಂದಲೇ ' ಅರ್ಥಾಯ ನಮಃ ಅನರ್ಥಾಯ ನಮಃ, ಭಯಕೃತೇ ನಮಃ, ಭಯನಾಶನಾಯ ನಮಃ, ಗುಣಾಯ ನಮಃ, ನಿರ್ಗುಣಾಯ ನಮಃ, ಅಣುವೇ ನಮಃ, ಬೃಹತೇ ನಮಃ' ಇತ್ಯಾದಿಯಾಗಿ ಶ್ರೀ ಹರಿಯನ್ನು ವರ್ಣನೆ ಮಾಡಿರುವುದು. (ವಿಷ್ಣು ಸಹಸ್ರನಾಮ). ಆದ್ದರಿಂದ ಈ ಎರಡು ಶಕ್ತಿಗಳಿಗೆ ನಾಶವೇ ಇಲ್ಲ. ಅರ್ಥಾತ್ ಈ ಎರಡು ಕ್ರಿಯೆಗಳ ಶಕ್ತಿಯನ್ನು ಸೂಚಿಸುವ ಶ್ರೀ ಹರಿಗೆ ನಾಶವೇ ಇಲ್ಲ. ಆದ್ದರಿಂದ ಶ್ರೀಹರಿ ಅವಿನಾಶಿ ಎಂದರು.

ಪರಮಾತ್ಮನ ಸೃಷ್ಟಿಯಲ್ಲಿ ಮನುಷ್ಯವರ್ಗವು ಅತಿಶ್ರೇಷ್ಠವೆನಿಸಿದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಚಿಂತನಾ ಶಕ್ತಿ ಬರುತ್ತೆ. ಈ ಚಿಂತನಾ ಶಕ್ತಿಯ ಆಧಾರದ ಮೇಲೆಯೇ, ಅವನ ಆಗುಹೋಗುಗಳೆಲ್ಲವೂ ಅವಲಂಬಿಸಿವೆ. ಇದರಲ್ಲಿ ಒಳ್ಳೆಯದೂ ಇವೆ, ಕೆಟ್ಟದ್ದೂ ಇವೆ. ಒಳ್ಳೆಯದು ಮತ್ತು ಕೆಟ್ಟದ್ದು ಎರಡನ್ನೂ ತುಲನೆ ಮಾಡಿ ಸರಿಯಾದ ಮಾರ್ಗದಲ್ಲಿ ನಡೆದುಕೊಳ್ಳುವುದಕ್ಕೆ ಪ್ರಾರಂಭ ಅಥವಾ ಮೂಲ ಪ್ರಸಾದವಾಗಿ ಇರುವುದನ್ನು ಸೂಚಿಸುವುದೇ ಆದಿಶೇಷ ಎಂದರು.



Sri Vidyabharathi Book Centre, Sringori

CC-O. In Public Domain. Digitized by eGangotri

ಚಿತ್ರ 1



ಮನುಷ್ಯನ ಶರೀರದಲ್ಲಿ ಇದನ್ನು ಚಿಂತನೆ ಮಾಡುವ ಕೇಂದ್ರವೇ ಮಿದುಳು. ಮಿದುಳು. ಈ ಮಿದುಳು ಸರ್ಪದ ಹೆಡೆಯಾಕಾರದಲ್ಲಿರುವುದರಿಂದ ಇದಕ್ಕೆ ಕುಂಡಲಿನಿ ಎಂದರು. ಕುಂಡಲಿನಿ ಎಂದರೆ ಸುರುಳಿ ಸುತ್ತಿಕೊಂಡ ಹಾವು ಎಂದು ನಿಘಂಟಿನ ಅರ್ಥ. ಈ ರೀತಿ ಸುರುಳಿ ಸುತ್ತಿಕೊಂಡಿರುವ ಹಾವನ್ನು ಉದ್ರೇಕಿಸಿದರೆ ಹೆಡೆಬಿಡುತ್ತದೆ. ಇದೇ ರೀತಿ ಮನುಷ್ಯನ ಮಿದುಳು ಸುಪ್ತಾವಸ್ಥೆಯಲ್ಲಿರುತ್ತೆ. ಇದನ್ನು ಸಾಧನೆಯಿಂದ (ಅಂದರೆ ತಪಸ್ಸು, ಯೋಗ, ಚಿಂತನ ಇತ್ಯಾದಿಗಳು) ಉದ್ರೇಕಿಸಿದರೆ ಜಾಗ್ರತವಾಗುತ್ತೆ. ಇದನ್ನೇ 'Awakening' ಎಂದು ಹೇಳುವುದು. (Mentally awake). ಇದು ಅಸಾಧಾರಣ ಶಕ್ತಿ ಹೊಂದುವುದಕ್ಕೆ ನಾಂದಿ. ಈ ದೃಷ್ಟಿಯಿಂದಲೇ ಶ್ರೀ ವಿಷ್ಣುವನ್ನು "ಕುಂಡಲಿನಿ " ಎಂದರು. ("...ಅರೌದ್ರಃ ಕುಂಡಲೀ ಚಕ್ರೀ"- ವಿಷ್ಣು ಸಹಸ್ರನಾಮ) "ಕುಂಡಲಿನೇ ನಮಃ " ಎಂದು ಪೂಜಿಸುವುದು. (ಚಿತ್ರ 1)

ಮಿದುಳಿನಲ್ಲಿ ಜಾಗ್ರತ ಮತ್ತು ಸುಪ್ತ (Conscious & Subconsious) ಎಂಬ ಎರಡು ಕ್ರಿಯೆಗಳು ಇವೆ ಎಂದು ಮನಃಶಾಸ (Psychology) ಹೇಳುತ್ತೆ. ಸರ್ಪದ ಹೆಡೆಯಾಕಾರದ ಈ ಮಿದುಳೇ ಮನುಷ್ಯನ ಪೂರ್ತ ಆಗುಹೋಗುಗಳನ್ನೆಲ್ಲಾ ನಿಯಂತ್ರಿಸುವ ಕೇಂದ್ರ. ಈ ಮಿದುಳು ಪ್ರದೇಶಕ್ಕೆ ಬ್ರಹ್ಮಾಂಡ ಎಂದರು. (ಗಾಯತ್ರಿ ಮಂತ್ರದ ಮಹತ್ವ ನೋಡಿ)



Sri Vidyabharathi Book Centre, Sringeri

CC-0. In Public Domain. Digitized by eGangotri

ವ[illegible] ಕುಟುಂಬದ ಆಗುಹೋಗುಗಳನ್ನು ನಿಯಂತ್ರಿಸಲು ಚಿಂತನೆ ಮಾಡುವ ಶಕ್ತಿ ಮನುಷ್ಯನಿಗೆ ಮಾತ್ರ ಇದೆ. ಈ ದೃಷ್ಟಿಯಿಂದಲೇ ವಿಶ್ವದ ಅರ್ಥಾತ್ ಬ್ರಹ್ಮಾಂಡದ ಆಗುಹೋಗುಗಳನ್ನು ಚಿಂತನೆ ಮಾಡಿ ನಿಯಂತ್ರಿಸುವ ಸೂಚನೆಯೇ ಮಹಾವಿಷ್ಣುವು ಶೇಷಶಾಯಿಯಾಗಿರುವ ಸಂಕೇತ. ಈ ದೃಷ್ಟಿಯಿಂದಲೇ ಈ ಮಿದುಳಿನ ಭಾಗಕ್ಕೆ ಬ್ರಹ್ಮಾಂಡ ಎಂದರು.

ಮನುಷ್ಯನ ಮಿದುಳು, ಶರೀರದ ಎಲ್ಲ ಅಂಗಗಳಿಗೂ ಸಂಬಂಧ ಹೊಂದಿದೆ. ಆಯಾಯ ಅಂಗಗಳು, ಅವುಗಳ ಕೆಲಸವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಸೂಚನೆ ಸದಾ ಕೊಡುತ್ತಿರುತ್ತೆ. ಮಿದುಳು ಒಂದು Telephone Exchange ನಂತೆ ಇದೆ. ಒಂದು ಸಣ್ಣ ಉದಾಹರಣೆ ಕೊಟ್ಟರೆ ಇದರ ಪರಮಾರ್ಥವು ಗೊತ್ತಾಗುತ್ತೆ; ಕಾಲಿಗೆ ಮುಳ್ಳು ಚುಚ್ಚಿದರೆ ಕೂಡಲೇ ಕಣ್ಣು ಯಾವ ಭಾಗದಲ್ಲಿ ಮುಳ್ಳು ಚುಚ್ಚಿದೆ ಎಂಬುದನ್ನು ನೋಡುತ್ತೆ. ನಂತರ ಸುಲಭವಾಗಿ ಆ ಮುಳ್ಳು ಬರುವ ಹಾಗಿದ್ದರೆ, ಕೈಗಳು ತೆಗೆಯುತ್ತವೆ. ಸುಲಭವಾಗಿ ಬರದಿದ್ದರೆ, ಸೂಜಿಯನ್ನು ಉಪಯೋಗಿಸಿ ತೆಗೆಯುವಂತೆ ಕೈಗಳಿಗೆ ಸೂಚನೆ ಬರುತ್ತೆ. ಇದೆಲ್ಲಾ ಆಗಬೇಕಾದರೆ ಮಿದುಳಲ್ಲಿರುವ ಆಯಾಯ ಭಾಗದ ಕೇಂದ್ರಗಳ ನರಗಳ ಮುಖಾಂತರ ಪ್ರಚೋದನೆಯಾಗುತ್ತಿರಬೇಕು.

ಇಷ್ಟೇ ಅಲ್ಲ. ಮೊದಲೇ ತಿಳಿಸಿದಂತೆ, ಮನುಷ್ಯನು ಸಂಘಜೀವಿ. ಜೀವವಿರುವವರೆಗೂ ಸುಖವಾಗಿರುವುದಕ್ಕೆ ಅನೇಕ ಸೌಲಭ್ಯಗಳನ್ನು ಒದಗಿಸಿಕೊಳ್ಳುವುದಕ್ಕೆ ಚಿಂತನೆ ಮಾಡುವುದಲ್ಲದೆ, ಸತ್ತ ನಂತರ ಉತ್ತಮ ಜನ್ಮ ಪಡೆಯುವುದಕ್ಕಾಗಿಯೂ ಮತ್ತು ವಿಶ್ವವನ್ನು ನಿಯಂತ್ರಿಸುವ ದಿವ್ಯಶಕ್ತಿಯನ್ನೇ (ಅರ್ಥಾತ್ ಪರಮಾರ್ಥವನ್ನು) ಅರ್ಥ ಮಾಡಿಕೊಳ್ಳಲೂ ಸಹ ಚಿಂತನೆ ಮಾಡಬೇಕು. ಈ ದಿವ್ಯಶಕ್ತಿಯನ್ನೇ ದೇವರು ಎಂದರು. ಈ ರೀತಿ ಆ ದಿವ್ಯ ಶಕ್ತಿ ಅರ್ಥಾತ್ ಪರಮಾತ್ಮನನ್ನು ತಿಳಿದುಕೊಳ್ಳುವುದೇ ಪಾರಮಾರ್ಥಿಕ. ಈ ದಿಶೆಯಲ್ಲಿ ಚಿಂತನೆ ಮಾಡಿ ಸಾಕ್ಷಾತ್ಕಾರ ಮಾಡಿಕೊಂಡಿರುವ ಮಹಾತ್ಮರು ಇದನ್ನು ಅಂದರೆ ಈ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದಕ್ಕೆ ಏನು ಮಾಡಬೇಕೆಂಬುದರ ವಿಧಿ ನಿಯಮಗಳನ್ನು ಅನುಗ್ರಹ ಮಾಡಿದ್ದಾರೆ. ಈ ವಿಧಿ ನಿಯಮಗಳೇ ಸಾಧನೆ ಅರ್ಥಾತ್ ಧರ್ಮಾಚರಣೆಗಳು, ಇವುಗಳು ಮನುಷ್ಯನು ದೈಹಿಕವಾಗಿ ಮಾನಸಿಕವಾಗಿ ಆರೋಗ್ಯವಾಗಿರುವುದಕ್ಕೆ ಸಹಾಯಕಾರಿ. ಇಂಥ ಅಮೂಲ್ಯ ಸಾಧನೆಗಳನ್ನು ಚಿಂತನೆಮಾಡಿ, ಅನುಷ್ಠಾನಕ್ಕೆ ತರುವಂತೆ ಮಾಡುವ ಕೇಂದ್ರವೇ ಮಿದುಳು ಅರ್ಥಾತ್ ಬ್ರಹ್ಮಾಂಡ.

ಈ ಮಿದುಳು ಸರ್ಪದ ಹೆಡೆಯಾಕಾರದಲ್ಲಿರುವುದರಿಂದ ಆದಿಶೇಷನಿಗೆ ಹೋಲಿಸಿದರು ಎಂದು ಹೇಳಿದೆಯಷ್ಟೆ. ಸರ್ಪದ ಹೆಡೆಗೆ ಹೋಲಿಸುವುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri
ಮತ್ತೊಂದು ಮುಖ್ಯವಾದ ಕಾರಣವನ್ನು ಸಹ ನಾವು ಚಿಂತನೆ ಮಾಡಬೇಕು.

ಮೇಲ್ನೋಟಕ್ಕೆ ಸರ್ಪವು ದುಷ್ಟಜಂತು ಎಂದು ಪರಿಗಣಿಸಲಾಗಿದೆ. ಇದರ ವಿಷ ಹಾಲಾಹಲ. ಅಂಥಾದ್ದರಲ್ಲಿ ಈ ದುಷ್ಟಜಂತುವಿಗೆ ಏಕೆ ಇಷ್ಟು ಪ್ರಾಶಸ್ತ್ಯ ಕೊಟ್ಟಿದ್ದಾರೆ ?

ಸರ್ಪವು ದುಷ್ಟಜಂತುವೇನೋ ಸರಿಯೆ. ಆದರೆ ಉದ್ದೇಶಪೂರ್ವಕವಾಗಿ ಇದು ಮನುಷ್ಯನಿಗೆ ಉಪದ್ರವ ಕೊಡುವುದಿಲ್ಲ. ಅದಕ್ಕೆ ತೊಂದರೆಯಾದರೆ ಮಾತ್ರ ಮಾರಕವಾಗುತ್ತೆ. ಸರ್ಪದಲ್ಲಿರುವ ಕೆಲವು ಒಳ್ಳೆ ಗುಣಗಳನ್ನು ಗಣನೆಗೆ ತೆಗೆದುಕೊಂಡು ಅದರಂತೆ ಮನುಷ್ಯನೂ ಬಾಳಲಿ ಎಂಬ ಉದ್ದೇಶದಿಂದ ಸರ್ಪಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ.

ನಾಗರಹಾವು ಸಾಮಾನ್ಯವಾಗಿ 40 ರಿಂದ 60 ರವರೆಗೆ ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗಳು ಮರಿಯಾದ ನಂತರ ಒಂದಕ್ಕೊಂದು ಕಚ್ಚಾಡುವುದಿಲ್ಲ. ಅವುಗಳು ಕಾಡಿಗೆ ಆಹಾರವನ್ನು ಅರಸಿಕೊಂಡು ನಾನಾ ಕಡೆ ಹೊರಟು ಹೋಗುತ್ತವೆ. ಮರಿಗಳು ದೊಡ್ಡವಾದ ಮೇಲೆ ಸಾಮಾನ್ಯವಾಗಿ ಒಂದೇ ಪ್ರದೇಶದಲ್ಲಿ (territory) ವಾಸಮಾಡುವುವು. ಹೀಗೆ ಒಂದೇ ಪ್ರದೇಶದಲ್ಲಿ ವಾಸಮಾಡುವ ಈ ಸರ್ಪಗಳು ಅಕಸ್ಮಾತ್ ಒಂದನ್ನೊಂದು ಸಂಧಿಸಿದಾಗ ಕಚ್ಚಾಡುವುದಿಲ್ಲ. ಅವುಗಳ ಪಾಡಿಗೆ ಅವು ತಮ್ಮ ದಾರಿಯಲ್ಲಿ ಹೊರಟು ಹೋಗುತ್ತವೆ. ಪ್ರಾಣಿಶಾಸ್ತ್ರದ ಪ್ರಕಾರ, ಬೇರೆ ಪ್ರದೇಶಗಳಿಂದ ಬಂದವುಗಳು ಮಾತ್ರ ತಮ್ಮ ಅಸ್ತಿತ್ವಕ್ಕೆ ಕಚ್ಚಾಡುತ್ತವೆ. ಒಂದೇ ಪ್ರದೇಶದಲ್ಲಿರುವ ಈ ಹಾವುಗಳಿಗೆ ಬೇರೆ ಪ್ರದೇಶದ ಹಾವುಗಳು ಸಂದರ್ಶಿಸಿದಾಗ ಇವು ಬೇರೆ ಪ್ರದೇಶದವುಗಳೆಂದು ಗೊತ್ತಾಗುತ್ತೆ. ಇದು ಪ್ರಕೃತಿ ದತ್ತವಾದ ವರ. ಒಂದೇ ಕುಟುಂಬಕ್ಕೆ ಸೇರಿದ ಈ ಸರ್ಪಗಳು ಸಹಬಾಳ್ವೆ ಮಾಡಬೇಕೆಂಬುದೇ ಮುಖ್ಯವಾದ ನೀತಿ.

ಹಿಂದೆ ಮನುಷ್ಯ ವರ್ಗದಲ್ಲೂ ಸಹ ಈ ರೀತಿ ಸಹಬಾಳ್ವೆಯ ಮನೋಭಾವನೆ ಇತ್ತು. ಆದರೆ ಈ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಣ್ಣ ಒಂದು ಪಕ್ಷಕ್ಕೆ ಸೇರಿದರೆ, ತಮ್ಮ ಒಂದು ಪಕ್ಷ ಸೇರುವುದು. ಅಪ್ಪ ಒಂದು ಪಕ್ಷವಾದರೆ ಮಗ ಮತ್ತೊಂದು ಪಕ್ಷ, ಅಮ್ಮ ಒಂದು ಪಕ್ಷ, ಮಗಳು ಇನ್ನೊಂದು ಪಕ್ಷ, ಗಂಡ ಹೆಂಡತಿಯರು ಬೇರೆ ಬೇರೆ ಪಕ್ಷಗಳು, ಬಾಲ್ಯದಿಂದಲೂ ಒಂದೇ ಭಾವನೆಯುಳ್ಳ ಪ್ರಾಣ ಸ್ನೇಹಿತರು ಬೇರೆ ಪಕ್ಷ ಹೀಗೆ ರಾಜಕೀಯ ಪ್ರವೇಶ ಮಾಡಿ ತಮ್ಮ ತಮ್ಮಲ್ಲೇ ವೈರಿಗಳಾಗುತ್ತಿರುವುದು ಈಗಿನ ಸಮಾಜದ ವೈಖರಿ. ಇದು ಎಂಥಾ ವಿಪರ್ಯಾಸ ! ಇದು ಸಹಬಾಳ್ವೆಯೇ ? ವಿಷಜಂತುಗಳಾದ ಈ ಸರ್ಪಗಳಿಗಿಂತಲೂ ಮನುಷ್ಯನು ಪ್ರಜಾಪ್ರಭುತ್ವದ ಹೆಸರಿನಲ್ಲಿ ಕೀಳಾಗುತ್ತಿದ್ದಾನೆ.


Sri Vidyabharathi Book Centre, Sringeri

CC-O. In Public Domain. Digitized by eGangotri

ಈ ರೀತಿಯ [illegible] ಬೇರೆ ಯಾವ ಪ್ರಾಣಿಯಲ್ಲೂ ಇಲ್ಲವೆಂದರೆ ತಪ್ಪಾಗಲಾರದು. ಇದು ಮನುಷ್ಯ ವರ್ಗಕ್ಕೆ ಒಂದು ಮಾರ್ಗದರ್ಶನವಲ್ಲವೇ ? ಇದಕ್ಕಿಂತ ಮಿಗಿಲಾದ ನೀತಿ ಅಥವಾ ಮಾರ್ಗದರ್ಶನ ಇನ್ನಾವುದಿದೆ ? ಇದೇ ವಿಶ್ವಮಾನವತ್ವ ಅರ್ಥಾತ್ ವಿಶ್ವಭ್ರಾತೃತ್ವ. ಈ ದೃಷ್ಟಿಯಿಂದಲೇ ಬೆಳಗ್ಗೆ ಹಾಸಿಗೆಯಿಂದ ಏಳುತ್ತಿದ್ದ ಹಾಗೇ "ಉತ್ತಿಷ್ಠ ಉತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ! ಉತ್ತಿಷ್ಠ ಕಮಲಾಕಾಂತ-ತ್ರೈಲೋಕ್ಯಂ ಮಂಗಳಂ ಕುರು|| ಎಂದು ಹೇಳುವ ಸಂಸ್ಕೃತಿ ನಮ್ಮ ಹಿಂದೂ ಧರ್ಮದಲ್ಲಿ ಬೆಳೆದು ಬಂದಿರುವುದು. ಇಷ್ಟೇ ಅಲ್ಲ, ಪ್ರತಿನಿತ್ಯವೂ ದೇವತಾರ್ಚನಾ ನಂತರ ದೇವರನ್ನು ಈ ರೀತಿ ಪ್ರಾರ್ಥಿಸುವುದು "ಸರ್ವೇಜನಾಃ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು" ಎಂಥಾ ವಿಶಾಲ ಮನೋಭಾವನೆಯ ಸಂಸ್ಕೃತಿ, ಈ ರೀತಿಯ ಸಂಸ್ಕೃತಿ ಇನ್ನಾವ ಜನಾಂಗದಲ್ಲಿಯಾಗಲೀ, ಅಥವಾ ಇನ್ನಾವ ಮತದಲ್ಲಾಗಲೀ ಇದೆಯೇ?

ಈಗ ಶೇಷನಿಗೆ 3, 5 ಮತ್ತು 7 ಹೆಡೆಗಳನ್ನು ಕೊಟ್ಟಿರುವ ಪರಮಾರ್ಥವನ್ನು ವಿಮರ್ಶೆ ಮಾಡೋಣ. ಮನುಷ್ಯನ ದೇಹರಚನೆ, ದೈವ ಸೃಷ್ಟಿಯಲ್ಲಿ ಅತಿ ವಿಚಿತ್ರವಾದದ್ದು, ಈ ಮನುಷ್ಯ ದೇಹವು ಸದಾ ಆರೋಗ್ಯವಾಗಿರಬೇಕಾದರೆ (ದೈಹಿಕ ಮತ್ತು ಮಾನಸಿಕ ಆರೋಗ್ಯ), ಶರೀರದಲ್ಲಿರುವ ತ್ರಿದೋಷಗಳು(ತ್ರಿಧಾತುಗಳು) ಸರಿಯಾಗಿ ನಿಯಂತ್ರಿಸುವುದಕ್ಕೆ ಸಹಕಾರಿಯಾದ ಬುದ್ಧಿಯನ್ನುಂಟುಮಾಡುವುದೇ (ಅರ್ಥಾತ್ ಜ್ಞಾನವನ್ನುಂಟು ಮಾಡುವುದೇ) ಮೂರು ಹೆಡೆಯ ಸಂಕೇತ.

ಮನುಷ್ಯನ ದೇಹವು ಪಂಚಭೂತಗಳಿಂದ ಕೂಡಿದೆ. (1) ಚರ್ಮ, ಮೂಳೆ, ನಾಡಿ, ಕೂದಲು, ಮಾಂಸ ಇವುಗಳು ಭೂ ತತ್ವಕ್ಕೆ ಸೇರಿದ್ದು ; (2) ಹಸಿವು, ಬಾಯಾರಿಕೆ, ಆಲಸ್ಯ, ನಿದ್ರೆ, ಅಪೇಕ್ಷೆ ಇವುಗಳು ಅಗ್ನಿ ತತ್ವಕ್ಕೆ ಸೇರಿದ್ದು; (3) ಬಾಗುವುದು, ಓಡುವುದು, ದಾಟುವುದು, ಹರಡುವುದು, ಅಲ್ಲಾಡುವುದು ಇವುಗಳು ವಾಯು ತತ್ವಕ್ಕೆ ಸೇರಿದ್ದು; (4) ಜೊಲ್ಲು, ಮೂತ್ರ, ವೀರ್ಯ, ಮಜ್ಜೆ, ರಕ್ತ ಇವುಗಳು ಜಲ ತತ್ವಕ್ಕೆ ಸೇರಿದ್ದು ಮತ್ತು ಕೊನೆಯದಾಗಿ ; (5) ಶಬ್ದ, ಚಿಂತೆ, ಶೂನ್ಯತೆ, ಶೋಕ, ಸಂಶಯ ಇವುಗಳು ಆಕಾಶ ತತ್ವಕ್ಕೆ ಸೇರಿದ್ದು. (ಗರುಡ ಪುರಾಣದಿಂದ)

ಈ ರೀತಿ ಮನುಷ್ಯನ ದೇಹವು ಪಂಚಭೂತಗಳಿಂದ ಕೂಡಿದೆ. ಮನುಷ್ಯನು ಆರೋಗ್ಯವಾಗಿರಬೇಕಾದರೆ (ದೈಹಿಕ ಮತ್ತು ಮಾನಸಿಕ ಆರೋಗ್ಯ) ಈ ಪಂಚಭೂತಗಳು ಸರಿಯಾದ ರೀತಿಯಲ್ಲಿ ನಿಯಂತ್ರಿಸಲ್ಪಡಬೇಕು. ಯಾವುದೊಂದು ತತ್ವವು ಹೆಚ್ಚು ಕಡಿಮೆಯಾದರೆ, ಅದಕ್ಕೆ ಸಂಬಂಧಪಟ್ಟ ರೋಗವುಂಟಾಗುತ್ತೆ. ಉದಾಹರಣೆಗೆ ಭೂತತ್ವಕ್ಕೆ ಸೇರಿದ ಶಕ್ತಿಯು ಕುಂದಿದರೆ,



Sri Vidyabharathi Book Centre, Sringeri

CC-O. In Public Domain. Digitized by eGangotri
ಚರ್ಮ, ಮೂಳೆ, ಕೂದಲು ಇವುಗಳಿಗೆ ಸಂಬಂಧಪಟ್ಟ ರೋಗಗಳು ಬರುತ್ತವೆ. ಹೀಗೆಯೇ ಆಯಾಯ ತತ್ವಗಳ ಶಕ್ತಿಯು ಕಡಿಮೆಯಾದರೆ, ಅವುಗಳಿಗೆ ಸಂಬಂಧಪಟ್ಟ ರೋಗಗಳು ಬರುತ್ತವೆ. ಈ ಐದು ತತ್ವಗಳನ್ನು ನಿಯಂತ್ರಿಸಿ ಏರುಪೇರಾಗದಂತೆ ನೋಡಿಕೊಳ್ಳುವುದಕ್ಕೆ ಬುದ್ಧಿಯನ್ನುಂಟುಮಾಡುವುದೇ ಐದು ಹೆಡೆಗಳ ಸಂಕೇತ.

ಇನ್ನು ಏಳು ಹೆಡೆಗಳ ಸಂಕೇತ ; ಮನುಷ್ಯನ ದೇಹವು ಸಪ್ತಧಾತುಗಳಿಂದ ಕೂಡಿದೆ. ರಸ, ರಕ್ತ, ಮಾಂಸ, ಮೇಧಸ್ಸು, ಮಜ್ಜೆ, ಅಸ್ಥಿ ಮತ್ತು ಶುಕ್ಲ ಇವುಗಳೇ ಸಪ್ತಧಾತುಗಳು. ಧಾತು ಎಂದರೆ ಶಕ್ತಿ, ಪರಮಾತ್ಮ, ಹುಟ್ಟು, ಸಾಮರ್ಥ್ಯ ಎಂದು ನಿಘಂಟಿನ ಅರ್ಥ. ಪರಮಾತ್ಮ ಎಂದರೆ ವಿಷ್ಣು. ವಿಷ್ಣು ಸ್ಥಿತಿಗೆ ಕಾರಕ. ದೇಹದ ಒಳ್ಳೆಯ ಸ್ಥಿತಿಗೆ ಅಂದರೆ ಆರೋಗ್ಯಕ್ಕೆ (ದೈಹಿಕ ಮತ್ತು ಮಾನಸಿಕ ) ಪ್ರಯತ್ನಿಸಬೇಕು. ಯಾವ ರೀತಿ ಪ್ರಯತ್ನ ಮಾಡಬೇಕೆಂಬುದು ಪ್ರಚೋದನೆಯಾಗುವ ಸ್ಥಾನ ಮಿದುಳು ( ಸರ್ಪದ ಹೆಡೆಯ ರೂಪ).

ಮಿದುಳಿನಲ್ಲಿ ಏಳು ಸ್ಥಾನಗಳಿವೆ. (1) ಮುಂಭಾಗದ ಸಮೂಹ ಅಂಗಗಳು (Frontat tobee); (2) ಕಪಾಳ ಸಮೂಹದ ಅಂಗಗಳು ( Temporal lob ) ; (3) ಪೀಯೂಷ ಗ್ರಂಥಿಕ ಕಾಂಡ (Stalk of pitutiary gland); (4) ಮಿದುಳನ್ನು ಕೂಡಿಸುವ ಎಳೆ ( Pons) ; (5) ಅಂಗದ ಒಳಭಾಗ ( Medulla ) ; (6) ಬೆನ್ನುಹುರಿ ( Spinal Cord) ; ಮತ್ತು ಕೊನೆಯದಾಗಿ (7)ಹಿಂದಿನ ಸಣ್ಣ ಮಿದುಳು (Cerebellum) ( ಚಿತ್ರ 2)

( ಚಿತ್ರ 2)






Sri Vidyabharathi Book Centre, Sringeri

ಈ ಏಳು ಸ್ಥಾನಗಳಿಗೂ ಮೇಲೆ ತಿಳಿಸಿದ ಸಪ್ತಧಾತುಗಳಿಗೂ ಸಂಬಂಧ ಸರಿಯಾಗಿದ್ದರೆ ಮಾತ್ರ ಮನುಷ್ಯನ ಆರೋಗ್ಯ (ದೈಹಿಕ ಮತ್ತು ಮಾನಸಿಕ) ಸರಿಯಾಗಿರುತ್ತೆ. ಈ ಸಪ್ತಧಾತುಗಳನ್ನು ಸರಿಯಾದ ರೀತಿಯಲ್ಲಿ ನಿಯಂತ್ರಿಸುವುದೇ ಮಿದುಳಿನ ಈ ಏಳು ಕೇಂದ್ರಗಳು. ಇವುಗಳು ಅಂದರೆ ಈ ಕೇಂದ್ರಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಬೇಕಾದ ಪ್ರಚೋದನೆ ಮಾಡುವ ಮುಖ್ಯ ಕೇಂದ್ರ ಮಿದುಳು. ಈ ದೃಷ್ಟಿಯಿಂದ ಮಿದುಳನ್ನು ಸೂಚಿಸುವ ಸರ್ಪದ ಹೆಡೆಗೆ ಏಳು ಹೆಡೆ ಕೊಟ್ಟರು.

CC-O. In Public Domain. Digitized by eGangotri

ಇನ್ನು ಆದಿಶೇಷನಿಗೆ ಸಹಸ್ರಫಣ ಎಂದು ಏಕೆ ಹೇಳಿದರು ? ಸಹಸ್ರ ಫಣ ಎಂದರೆ ಸಾವಿರ ಹೆಡೆಗಳನ್ನುಳ್ಳವನು ಎಂದರ್ಥ. ಮಿದುಳು ಸರ್ಪದ ಹೆಡೆಯಾಕಾರದಲ್ಲಿದೆಯೆಂದು ಹೇಳಿದೆಯಷ್ಟೆ. ಈ ಮಿದುಳಿನಲ್ಲಿ ಸಹಸ್ರಾರು ಅಣುಕೋಶಗಳು (Cells) ಇವೆ. ಇವು ಒಂದೊಂದೂ ಬುದ್ಧಿಯ ಉಗಮ ಸ್ಥಾನಗಳು. ಈ ದೃಷ್ಟಿಯಿಂದ ಪರಮಾತ್ಮನಿಗೆ ಸಹಸ್ರ ಶೀರ್ಷ ಎಂದರು.

ಶ್ರೀಮನ್ನಾರಾಯಣನು ಕ್ಷೀರಸಾಗರವಾಸಿ ಎಂದರು ಏಕೆ ? ಕ್ಷೀರ ಎಂದರೆ ನಿಘಂಟಿನ ಪ್ರಕಾರ ನೀರು ಎಂದರ್ಥ. ಆದ್ದರಿಂದ ಕ್ಷೀರಸಾಗರ ಎಂದರೆ ನೀರಿನ ಸಾಗರ. ವಿಶ್ವವೇ ಒಂದು ನೀರಿನ ಸಾಗರ. ಸಾಗರ ಎಂದರೆ ವಿಶಾಲವಾದ ಎಂದೂ ಅರ್ಥ. ಬ್ರಹ್ಮಾಂಡವೆಲ್ಲವನ್ನೂ ನೀರಿನ ಆವಿಯು (Water Vapour) ಆವರಿಸಿಕೊಂಡಿದೆ. ಬ್ರಹ್ಮಾಂಡದಲ್ಲಿ (ಪಕೃತಿಯಲ್ಲಿ) ಪಂಚ ಭೂತಗಳಲ್ಲೊಂದಾದ ಜಲತತ್ವವೆನಿಸಿದ ಈ ನೀರಿನ ಆವಿ ಇಲ್ಲದಿದ್ದರೆ, ಪ್ರಪಂಚವೇ ಅಸ್ತಿತ್ವದಲ್ಲಿರುವುದಕ್ಕಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ಕ್ಷೀರಸಾಗರ ಶಾಯಿ ಮತ್ತು ಶೇಷಶಾಯಿ ಎಂದರು.

ಬ್ರಹ್ಮಾಂಡವೆಲ್ಲವೂ ನೀರಿನ ಆವಿಯಿಂದ ಕೂಡಿದೆಯೆಂದು ಹೇಳಿದೆಯಷ್ಟೆ. ಮನುಷ್ಯನ ದೇಹವು ಶೇಕಡ ಎಂಭತ್ತರಷ್ಟು ಜಲವರ್ಗಕ್ಕೆ ಸೇರಿದೆ. ಎಂಭತ್ತರಷ್ಟು ಜಲವರ್ಗದ ಈ ಮನುಷ್ಯನ ದೇಹದಲ್ಲಿ ಶಿರಸ್ಸು ದೇಹದ ಮೇಲೆ ಇದೆ. ಈ ಪ್ರದೇಶವನ್ನು ಬ್ರಹ್ಮಾಂಡ ಎಂದರು. ಬ್ರಹ್ಮಾಂಡ ಎಂದರೆ ವಿಷ್ಣು ಎಂದೂ ಅರ್ಥ. ('ವಿಶ್ವಂ ವಿಷ್ಣುರ್ವಷಟ್ಕಾರೋ ..........................' (ವಿಷ್ಣು ಸಹಸ್ರನಾಮ). ವಿಶ್ವ ಎಂದರೆ ಬ್ರಹ್ಮಾಂಡ, (ವಿಷ್ಣು ಎಂದರೆ ನಾರಾಯಣ) ಹೀಗೆ ಸಪ್ತ ಧಾತುಗಳನ್ನು (ಅರ್ಥಾತ್ ಸಪ್ತ ಶಕ್ತಿಗಳನ್ನು) ನಿಯಂತ್ರಿಸುವ ಕೇಂದ್ರವಾದ ಸಪ್ತ ಹೆಡೆಯಾಕಾರದಲ್ಲಿರುವ ಮಿದುಳಿನ ಸ್ಥಾನ ಬ್ರಹ್ಮಾಂಡ ಅರ್ಥಾತ್ ವಿಷ್ಣು ದೇಹದ ಮೇಲೆ ( ಅಂದರೆ ಶೇಕಡ 80ರಷ್ಟು ಜಲವರ್ಗಕ್ಕೆ ಸೇರಿದ ದೇಹದ ಮೇಲೆ) ಇರುವುದರಿಂದ ಕ್ಷೀರಸಾಗರ ಶಾಯಿ ಮತ್ತು ಶೇಷಶಾಯಿ ಎಂದರು.



Sri Vidyabharathi Book Centre, Sringeri

CC-O. In Public Domain. Digitized by eGangotri

ಶೇಷಶಾಯಿಯಾದ ಶ್ರೀ ಮನ್ನಾರಾಯಣನ ನಾಭಿಯಿಂದ ಬಂದಿರುವ ಬ್ರಹ್ಮನ ಪರಮಾರ್ಥವನ್ನು ನೋಡೋಣ.

ತಾಯಿಯ ಗರ್ಭದಲ್ಲಿರುವ ಭ್ರೂಣಕ್ಕೆ (ಮಗುವಿಗೆ) ಆಹಾರವು ಹೊಕ್ಕಳಿನಿಂದಲೇ ಸರಬರಾಜಾಗಬೇಕು. ಜನನವಾದ ಮೇಲೆ ದೇಹಾರೋಗ್ಯಕ್ಕೆ (ಮಾನಸಿಕ ಮತ್ತು ದೈಹಿಕ) ಬೇಕಾಗುವ ಆಹಾರವನ್ನು ಸೂಚಿಸುವುದೇ ಬ್ರಹ್ಮ. ಬ್ರಹ್ಮ ಎಂದರೆ ನಿಘಂಟಿನ ಪ್ರಕಾರ ಸೃಷ್ಟಿ ಕರ್ತ. ಆಹಾರ, ಜ್ಞಾನ, ವೇದ, ನಿರ್ಮಲ ಇತ್ಯಾದಿಯಾಗಿ ಅನೇಕ ಅರ್ಥಗಳಿವೆ. ಸೃಷ್ಟಿಯಾದ ಮೇಲೆ ಸ್ಥಿತಿಗೆ ಸರಿಯಾದ ಆರೋಗ್ಯವಿರಬೇಕಲ್ಲವೇ? ಸರಿಯಾದ ಆರೋಗ್ಯವಿರಬೇಕಾದರೆ, ಆರೋಗ್ಯವನ್ನು ಅಭಿವೃದ್ಧಿಪಡಿಸುವ ಶುದ್ಧವಾದ ಆಹಾರಬೇಕಲ್ಲವೆ? ಸರಿಯಾದ ಆಹಾರವೆಂದರೆ, ಸರಿಯಾದ ದೇಹಾರೋಗ್ಯ ಮತ್ತು ಸನ್ಮಾರ್ಗದಲ್ಲಿ ಚಿಂತನೆ ಮಾಡುವ ಮಾನಸಿಕ ಆರೋಗ್ಯ. ಈ ಎರಡು ಆರೋಗ್ಯಗಳನ್ನು (ದೈಹಿಕ ಮತ್ತು ಮಾನಸಿಕ) ಕೊಡುವ ನಿರ್ಮಲವಾದ ಆಹಾರವನ್ನು ಸೂಚಿಸುವದೇ ಬ್ರಹ್ಮ. ಜನನಕ್ಕೆ ಪೂರ್ವ ಈ ಆಹಾರ ಸೇವನೆಯು ಹೊಕ್ಕಳಿನ ಮುಖಾಂತರ ಪ್ರಾರಂಭವಾಗುತ್ತೆ. ಆದ್ದರಿಂದ ನಿರ್ಮಲವಾದ ಆಹಾರವನ್ನು ಸೂಚಿಸುವ ಅರ್ಥಾತ್ ಕಾರಕನಾದ ಬ್ರಹ್ಮ ನಾಭಿ ಕಮಲದಿಂದ ಬಂದ ಎಂದು ಹೇಳಿರುವುದು. ಈ ಬ್ರಹ್ಮನಿಗೆ ಚತುರ್ಮುಖಗಳು ಎಂದರು. ಚತುರ್ಮುಖಗಳಿಂದ ಚತುರ್ವೇದಗಳು ಬಂದವು ಎಂದು ಹೇಳಲ್ಪಟ್ಟಿದೆ. ಮನುಷ್ಯನು ಆರೋಗ್ಯವಾಗಿರುವುದಕ್ಕೆ ಮತ್ತು ತನ್ನ ಬಾಳನ್ನು ಸದುಪಯೋಗಿಸಿಕೊಳ್ಳುವಂತೆ ಮಾಡಿಕೊಳ್ಳುವುದಕ್ಕೆ ಚಿಂತನೆ ಮಾಡುವುದೇ ಚತುರ್ವೇದಗಳ ಸಾರ. ಋಗ್ವೇದವು ಸ್ತುತಿರೂಪ ಜ್ಞಾನರಾಶಿ. ಯಜುರ್ವೇದವು ಪ್ರಾರ್ಥನಾ ನಿಯಮರೂಪ ಜ್ಞಾನರಾಶಿ. ಸಾಮವೇದವು ಗಾನರೂಪ ಜ್ಞಾನರಾಶಿ. ಮತ್ತು ಅಥರ್ವ ವೇದವು ಮಾಟ ಮಂತ್ರ, ಐಂದ್ರಜಾಲಿಕ ಜ್ಞಾನರಾಶಿ. ಮನುಷ್ಯನ ಬದುಕಿಗೆ ಈ ನಾಲ್ಕು ಜ್ಞಾನರಾಶಿಗಳಾದ ವಿದ್ಯೆಯು ಬೇಕೇಬೇಕು. ಇದನ್ನು ಸಾರುವುದೇ ಚತುರ್ಮುಖದ ಪರಮಾರ್ಥ.

ಈ ದೃಷ್ಟಿಯಿಂದಲೇ ನಾಭಿಗೆ ಒಂದು ವಿಶೇಷ ಸ್ಥಾನ ಕೊಡಲ್ಪಟ್ಟಿದೆ. ಗಾಯತ್ರಿ ಮಂತ್ರದ 9ನೇ ಅಕ್ಷರ 'ಭ' ಎಂಬ ಅಕ್ಷರವು ನಾಭಿಗೆ ಸಂಬಂಧಪಟ್ಟಿದ್ದು. ಇದರ ಪರಮಾರ್ಥವನ್ನು 'ಗಾಯತ್ರಿ ಮಂತ್ರದ ಮಹತ್ವ' ಎಂಬ ಪುಸ್ತಕದಲ್ಲಿ ವಿವರಿಸಲಾಗಿದೆ. ಇಷ್ಟೇ ಅಲ್ಲ, ನಾವು ಪ್ರತಿನಿತ್ಯವೂ ಮಾಡುವ ಸಂಧ್ಯಾವಂದನೆ ಅಂಗವಾಗಿಗಾಯತ್ರಿ ಜಪಾಂಗನ್ಯಾಸ ಮಾಡುವಾಗ "ಓಂ ಮಹಃ ನಾಭ್ಯೈ ನಮಃ" ಎಂದು ಅಂಗನ್ಯಾಸ ಮಾಡಬೇಕು ಮತ್ತು ಪ್ರತಿ ನಿತ್ಯವೂ ಆಚಮನ ಮಾಡುವಾಗ ಕೇಶವಾದಿ 24 ಶ್ರೀ ಹರಿಯ ದಿವ್ಯನಾಮಗಳನ್ನು ಅಂಗನ್ಯಾಸ ಮಾಡಿಕೊಂಡೇ ಹೇಳಬೇಕು. ಈ ಅಂಗನ್ಯಾಸಗಳಲ್ಲಿ ನಾಭಿಯ ಅಂಗನ್ಯಾಸವೂ ಒಂದು.



Sri Vidyabharathi Book Centre, Sringeri

CC-0. In Public Domain. Digitized by eGangotri

ಈ ಅಂಗನ್ಯಾಸದ [illegible] "ಗಾಯತ್ರಿ ಮಂತ್ರದ ಮಹತ್ವ"ದ ಪುಸ್ತಕದಲ್ಲಿ ವಿವರಿಸಿದೆ. ಮಾನ್ಯ ವಾಚಕರು ದಯವಿಟ್ಟು ಇದನ್ನು ನೋಡಬೇಕು. ಒಟ್ಟಿನಲ್ಲಿ ನಮ್ಮ ಆರೋಗ್ಯಕ್ಕೆ ಇತರ ಅಂಗಗಳಂತೆ ನಾಭಿಯೂ ಒಂದು ಮುಖ್ಯವಾದ ಅಂಗವೆಂದಾಯಿತಲ್ಲವೇ ?

ಇದನ್ನು ಸೂಚಿಸುವುದೇ ಸ್ಥಿತಿಗೆ ಕಾರಕನಾದ ಶ್ರೀಮನ್ನಾರಯಣನ ನಾಭಿ ಕಮಲದಿಂದ ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು ಬಂದಿರುವುದರ ಪರಮಾರ್ಥ.

ಕೊನೆಯದಾಗಿ ಶೇಷಶಾಯಿಯಾದ ಶ್ರೀಮನ್ನಾರಾಯಣನ ಪಾದ ಕಮಲಗಳ ಬಳಿ ಶ್ರೀಲಕ್ಷ್ಮಿ ಇರುವ ಪರಮಾರ್ಥವನ್ನು ವಿಚಾರಮಾಡೋಣ.

ಮೊದಲೇ ತಿಳಿಸಿದಂತೆ ದೇವರು ಎಂದರೆ ಒಂದು ಶಕ್ತಿ (ಶಕ್ತಿಮತಾಂ ಶ್ರೇಷ್ಠಾಯ ನಮಃ). ಈ ಶಕ್ತಿಯು ಉಂಟಾಗಬೇಕಾದರೆ Positive and Negative ಎಂಬ ಎರಡು ವಿಭಿನ್ನ ಶಕ್ತಿಗಳು ಕೂಡಬೇಕು. ಇದೇ ಪುರುಷ ಮತ್ತು ಪ್ರಕೃತಿ. ಈ ಎರಡು ಶಕ್ತಿಗಳು ಶ್ರೀಹರಿಯಲ್ಲಿವೆ ಎಂದು ಹೇಳಿದೆಯಷ್ಟೆ. ಇದನ್ನು ಸೂಚಿಸುವುದೇ ಶ್ರೀಲಕ್ಷ್ಮಿ (ಪ್ರಕೃತಿ) ನಾರಾಯಣ (ಪುರುಷ). ಈ ದೃಷ್ಟಿಯಿಂದಲೇ ಶ್ರೀ ಹರಿಯನ್ನು "ಪ್ರಜಾಪತಯೇ ನಮಃ " (ಪುರುಷ) "ವಿಶ್ವಯೋನಯೇ ನಮ : (ಪ್ರಕೃತಿ)" ಎಂದೂ ಶ್ರೀ ವೇದವ್ಯಾಸರು ವಿಷ್ಣು ಸಹಸ್ರನಾಮದಲ್ಲಿ ವರ್ಣನೆ ಮಾಡಿದ್ದಾರೆ.



Sri Vidyabharathi Book Centre, Sringeri

CC-O. In Public Domain. Digitized by eGangotri

# ನಾಗಪಂಚಮಿ (ಗರುಡಪಂಚಮಿ)

## [ವೈಜ್ಞಾನಿಕ ದೃಷ್ಟಿಯಲ್ಲಿ]

ನಾಗಪಂಚಮಿ ಅಥವಾ ಗರುಡ ಪಂಚಮಿಯು ಶ್ರಾವಣ ಶುದ್ಧದಲ್ಲಿ ಬರುತ್ತದೆ. ಈ ದಿನ ಹಾವಿನ ಹುತ್ತಕ್ಕಾಗಲೀ ಅಥವಾ ನಾಗ ಪ್ರತಿಮೆಗಾಗಲೀ 'ತನಿ' ಎರಿಯುವುದು ವಾಡಿಕೆ. ಒಡಹುಟ್ಟಿದವರ ದಿನವೆಂದು ಈ ದಿನಕ್ಕೆ ಹೇಳುತ್ತಾರೆ. ಈ ಗರುಡ ಪಂಚಮಿಯ ಆಚರಣೆಯನ್ನು ಶ್ರಾವಣ ಶುದ್ಧದಲ್ಲೇ ಏಕೆ ಆಚರಿಸಬೇಕು ? ಈ ದಿನ ತನಿ ಏಕೆ ಎರಿಯಬೇಕು ? ಮತ್ತು ಈ ದಿನ ಒಂದು ಗೊತ್ತಾದ ಭಕ್ಷ್ಯ ಮಾತ್ರ ಏಕೆ ಬೇಕು? (ಸಾಮಾನ್ಯವಾಗಿ ಎಣ್ಣೆಯಲ್ಲಾಗಲೀ ತುಪ್ಪದಲ್ಲಾಗಲೀ ಕರಿದ ಭಕ್ಷ್ಯ ಮಾಡುವಂತಿಲ್ಲ ) ; ಮತ್ತು ಈ ದಿನ ಒಡಹುಟ್ಟಿದವರ ದಿನ ಎಂದು ಏಕೆ ಕರೆದರು ?

ಶ್ರಾವಣ ಮಾಸ ಎಂದರೆ, ಚಂದ್ರನು, ಪೂರ್ಣಿಮಾದಿನ ಶ್ರವಣ ನಕ್ಷತ್ರದಲ್ಲಿರುವುದರಿಂದ ಈ ಮಾಸಕ್ಕೆ ಈ ಹೆಸರು ಬಂದಿದೆ. ಚಂದ್ರನು ಮನಃ ಕಾರಕ. ಈ ಶ್ರಾವಣ ಮಾಸದಲ್ಲಿ ಚಂದ್ರನ ಪ್ರಭಾವ ಹೆಚ್ಚು. ಅಂದರೆ ಮನಸ್ಸಿನ ಮೇಲೆ ಪ್ರಭಾವ ಬೀರುವ ವಾತಾವರಣವಿರುತ್ತೆ. ಚಂದ್ರನು, ಭೂಮಿಯ ಸುತ್ತ ತಿರುಗುವಾಗ, ಒಂದು ದಿನದಲ್ಲಿ ಸುಮಾರು 12 ಡಿಗ್ರಿಗಳಷ್ಟು ಸಂಚಾರ ಮಾಡುತ್ತಾನೆ. ಈ ಅವಧಿಗೆ ಒಂದು ತಿಥಿ ಎಂದರು. ಪಾಡ್ಯದಿಂದ ಚತುರ್ಥಿಯವರೆಗೆ, ದಿನಕ್ಕೆ 12 ಡಿಗ್ರಿಗಳಂತೆ, 48 ಡಿಗ್ರಿಗಳಾಗುತ್ತೆ. 48 ನೇ ಡಿಗ್ರಿಯಿಂದ 60 ಡಿಗ್ರಿಯವರೆಗೆ ಸಂಚಾರ ಮಾಡುವ ಕಾಲವೇ ಪಂಚಮಿ ಎಂದರು. ಚಂದ್ರನು, ಈ ಕೋನದಲ್ಲಿರುವಾಗ (angle) ತ್ರಿಕೋನವೆಂದು ಹೇಳುತ್ತಾರೆ. ಚಂದ್ರನು ತ್ರಿಕೋನಕ್ಕೆ ಬಂದಾಗ, ಭೂಮಿಯ ಮೇಲಿರುವ ಜಲವರ್ಗದ ಮೇಲೆ ಹೆಚ್ಚು ಪ್ರಭಾವ ಬೀರುವುದಕ್ಕೆ ಶುರುವಾಗುತ್ತೆ. ಮನುಷ್ಯನ ದೇಹವು ಶೇಕಡ 80 ರಷ್ಟು ಜಲವರ್ಗದಿಂದ ಕೂಡಿದೆ. ಆದ್ದರಿಂದ ಮನುಷ್ಯನ ಮೇಲೆ ಚಂದ್ರನ ಪ್ರಭಾವ ಬೀರಲೇ ಬೇಕು. ಚಂದ್ರನು ಮನಃಕಾರಕನಾಗಿರುವುದರಿಂದ ಮನುಷ್ಯನ ಮನಸ್ಸಿನ ಮೇಲೆ ಈ ಪ್ರಭಾವವುಂಟಾಗುತ್ತೆ.

ಚಂದ್ರನು, ತ್ರಿಕೋನಕ್ಕೆ ಬಂದಾಗ (ಪಂಚಮಿಯಂದು) ಮನಸ್ಸನ್ನು ಒಂದು ಸ್ಥಿಮಿತದಲ್ಲಿಡುವ ಸಲುವಾಗಿ, ಒಳ್ಳೆ ಸ್ವಾತಿಕ ಆಹಾರ ಸೇವನೆ ಮಾಡಬೇಕು. ಏಕೆಂದರೆ ಆಹಾರದ ಪ್ರಭಾವವು ಮನಸ್ಸಿನ ಮೇಲೆ ಅಪಾರ. ಸಾತ್ವಿಕ ಆಹಾರ, ರಾಜಸ ಆಹಾರ ಮತ್ತು ತಾಮಸ ಆಹಾರ ಎಂದು ಮೂರು ಬಗೆ. ಸಾತ್ವಿಕ ಆಹಾರ


Sri Vidyabharathi Book Centre, Sringeri

CC-0. In Public Domain. Digitized by eGangotri

ಸೇವನೆಯಿಂದ ಮನಸ್ಸು ಸಹ ಸಾತ್ವಿಕ ಸ್ವಭಾವಯುಕ್ತವಾಗುತ್ತೆ. ಈ ದೃಷ್ಟಿಯಿಂದ ಈ ದಿನ ಕೇವಲ ಸಾತ್ವಿಕ ಆಹಾರ ಸೇವನೆಯನ್ನೇ ನಿಯಮ ಮಾಡಿದರು.

ಸಾತ್ವಿಕ ಮನಸ್ಸಿನಿಂದ ಪಾರಮಾರ್ಥಿಕದ ವಿಚಾರ ಮಾಡುವುದಕ್ಕೆ ಮನಸ್ಸನ್ನು ಕೇಂದ್ರೀಕರಿಸುವ ಸಲುವಾಗಿ, ಸರ್ಪಪೂಜೆ ಮಾಡಬೇಕು. ಏತಕ್ಕೆಂದರೆ ಮನುಷ್ಯನ ದೇಹದಲ್ಲಿರುವ ಮನಸ್ಸಿನ ಕೇಂದ್ರವು ಮಿದುಳು. ಈ ಮಿದುಳು, ಸರ್ಪದ ಹೆಡೆಯಾಕಾರದಲ್ಲಿದೆ. ಇದಕ್ಕೆ 'ಕುಂಡಲಿನಿ' ಎಂದು ಕರೆಯಲಾಗಿದೆ. ಈ ಕುಂಡಲಿನಿಯನ್ನು ಸಾತ್ವಿಕ ರೀತಿಯಲ್ಲಿ ಉದ್ರೇಕಿಸುವುದೇ ಸರ್ಪಪೂಜೆಯ ಪರಮಾರ್ಥ. ಈ ಪೂಜೆಯ ಅಂಗವಾಗಿ ಹುತ್ತಕ್ಕೆ ತನಿ ಎರಿಯಬೇಕು ಏಕೆ ?

ತನಿ ಎರಿಯುತ್ತಿರುವಾಗ, ಒಂದು ವೇಳೆ ಹುತ್ತದಿಂದ ಜೀವಂತ ಸರ್ಪವು ಹೊರಕ್ಕೆ ಬಂದರೆ, ತನಿ ಎರಿಯುವುದನ್ನೂ ಬಿಟ್ಟು ಪಲಾಯನ ಸ್ತೋತ್ರವನ್ನೇ ಹಿಡಿಯಬೇಕಾಗುತ್ತೆ. ಹೀಗೆ ಜೀವಂತ ಹಾವನ್ನು ಕಂಡರೆ ಹೆದರಿಕೆಯಾದರೂ ಹುತ್ತಕ್ಕೆ ತನಿ ಎರಿಯುವ ಸಂಸ್ಕೃತಿ ಅಥವಾ ಆಚರಣೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದು ಏಕೆ ?

ಹುತ್ತವನ್ನು ಹಾವಿನ ಹುತ್ತವೆಂದು ಕರೆದರೂ, ಹಾವು ಹುತ್ತವನ್ನು ಕಟ್ಟುವುದಿಲ್ಲ. ಈ ಹುತ್ತವನ್ನು ಗೆದ್ದಲು(ಬಿಳಿ ಇರುವೆ) ಕಟ್ಟುತ್ತೆ. ಭೂಮಿಯೊಳಗಿರುವ ಮಣ್ಣನ್ನು ಮೇಲೆ ತಂದು, ಒಳಗೆ ವಾಸಿಸುವ ಜಾಗ ಮಾಡಿಕೊಳ್ಳುತ್ತವೆ. ಇಲಿಗಳು , ಕಪ್ಪೆಗಳು ಈ ಜಾಗವನ್ನು ಆಕ್ರಮಿಸಬಹುದು. ಹಾವಿಗೆ ಇಲಿಗಳು ಮತ್ತು ಕಪ್ಪೆಗಳು ಒಳ್ಳೆ ಆಹಾರ. ಹುತ್ತದೊಳಗಿರುವ ಇಲಿಗಳನ್ನು ಮತ್ತು ಕಪ್ಪೆಗಳನ್ನು ತಿನ್ನುವುದಕ್ಕೆ ಹಾವು ಹುತ್ತದೊಳಕ್ಕೆ ಹೋಗಿ, ಅಲ್ಲೇ ಕೆಲವು ಕಾಲ ಇರುವುದುಂಟು ಮತ್ತು ತನ್ನ ಶತ್ರುಗಳ ಬಾಧೆಯಿಂದ (ಗರುಡ, ಮನುಷ್ಯ) ರಕ್ಷಣೆ ಪಡೆದುಕೊಳ್ಳುವ ಸಲುವಾಗಿಯೂ ಸಹ, ಹಾವು ಹುತ್ತದಲ್ಲಿ ಕೆಲವು ಕಾಲ ಇರುತ್ತೆ. ಸಾಮಾನ್ಯವಾಗಿ ನಾಗರಹಾವುಗಳು ಮಾತ್ರ ಹುತ್ತಗಳಲ್ಲಿ ಮೊಟ್ಟೆ ಇಡುತ್ತವೆ. ಈ ಮೊಟ್ಟೆಗಳಿಂದ ಮರಿಗಳಾದ ನಂತರ ಹುತ್ತದಿಂದ ಹೊರಕ್ಕೆ ಬರುತ್ತವೆ. ಇದಿಷ್ಟೂ ನಾಗರಹಾವಿಗೂ ಮತ್ತು ಹುತ್ತಕ್ಕೂ ಇರುವ ಸಂಬಂಧ. ಆದರೆ ನಾವು ಇಲ್ಲಿ ಇನ್ನೊಂದು ವಿಷಯವನ್ನು ತಿಳಿದುಕೊಳ್ಳಬೇಕು. ಪರಿಣತರುಗಳ ಅಭಿಪ್ರಾಯದಂತೆ ಸಾಮಾನ್ಯ ನಾಗರಹಾವು ತಾನು ಇಟ್ಟ ಮೊಟ್ಟೆಗಳನ್ನು ಕಾವು ಕೊಟ್ಟು ಮರಿ ಮಾಡುವುದಿಲ್ಲ. ಮೊಟ್ಟೆಗಳನ್ನು ಕೆಲವು ಕಾಲ ಕಾಯುತ್ತಿರುತ್ತದೆ. (ಶತ್ರುಗಳಿಗೋಸ್ಕರ) ಕಾಳಿಂಗಸರ್ಪವು ಮಾತ್ರ (King Cobra) ಕಾವು ಕೊಟ್ಟು ಮರಿಮಾಡುತ್ತದೆ. ಆದ್ದರಿಂದ, ನಾಗರಹಾವು ಸದಾ ಹುತ್ತದಲ್ಲೇ ಇರುತ್ತೆ ಎಂಬುದು ತಪ್ಪು.


Sri Vidyabharathi Book Centre, Sringeri

CC-0. In Public Domain. Digitized by eGangotri

ಈಗ, ಹುತ್ತದ ವಿಷಯ ವಿಚಾರಮಾಡೋಣ : ಮೊದಲೇ ತಿಳಿಸಿದಂತೆ ಹುತ್ತವು ಗೆದ್ದಲಿನಿಂದ ಕಟ್ಟಲ್ಪಟ್ಟಿದು. ಭೂಮಿಯೊಳಗಿನಿಂದ ನಯವಾದ ಮಣ್ಣನ್ನು ಮೇಲಕ್ಕೆ ತಂದು, ಹುತ್ತವನ್ನು ಕಟ್ಟುತ್ತೆ. ಈ ಗೆದ್ದಲುಗಳ ಬಾಯಿಯಲ್ಲಿ ಒಂದು ದ್ರವ ಬರುತ್ತೆ. ಈ ದ್ರವವು ಮಣ್ಣಿನಲ್ಲಿ ಬೆರೆತರೆ, ಅದು ಗಟ್ಟಿಯಾಗುತ್ತೆ. ಇದು ಪ್ರಕೃತಿ ಸಹಾಯ. ಹೀಗೆ ಗಟ್ಟಿಯಾದ ಮಣ್ಣಿನಿಂದ ಕಟ್ಟಲ್ಪಟ್ಟ ಹುತ್ತವು ಮಳೆ ಬಿದ್ದರೂ ಕರಗುವುದಿಲ್ಲ. ಇದೇ ಇದರ ವೈಶಿಷ್ಟ್ಯ. ಅಲ್ಲದೆ, ಈ ಹುತ್ತದ ಮಣ್ಣಿನಲ್ಲಿ ಕಸವಾಗಲೀ, ಕಲ್ಲಾಗಲೀ ಯಾವುದೂ ಇರುವುದಿಲ್ಲ. ಶುದ್ಧವಾಗಿರುತ್ತೆ. ಇದನ್ನು ಸಹ ನಾವು ಮುಖ್ಯವಾಗಿ ಗಮನಿಸಬೇಕು. ಇದಿಷ್ಟು ಹುತ್ತದ ವಿಷಯ.

ಇನ್ನು ಹಾವಿನ ವಿಷಯ ವಿಮರ್ಶೆ ಮಾಡೋಣ : ಹಾವುಗಳಲ್ಲಿ ಅನೇಕ ಜಾತಿಗಳಿದ್ದರೂ, ನಾವು ನಾಗರ ಹಾವನ್ನು ಮಾತ್ರ ಪೂಜಿಸುತ್ತೇವೆ. ಇತರ ಹಾವುಗಳನ್ನು ಪೂಜಿಸುವುದಿಲ್ಲ. ಮೊದಲೇ ತಿಳಿಸಿದಂತೆ ನಮ್ಮ ಮಿದುಳು ಹಾವಿನ ಹೆಡೆಯಂತೆ ಇರುವುದೇ ಇದಕ್ಕೆ ಮುಖ್ಯ ಕಾರಣ.

ಹಾವುಗಳಿಗೆ ಕಾಲುಗಳಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಅವುಗಳು ತಮ್ಮ ಹೊಟ್ಟೆಯ ಮೇಲೆ ಚಲಿಸುತ್ತವೆ. ಹಾವುಗಳಿಗೆ ಜನನೇಂದ್ರಿಯವು ಹೊಟ್ಟೆಯ ಅಡಿ ಭಾಗದಲ್ಲಿದೆ. ಸಾಮಾನ್ಯವಾಗಿ ಗಂಡು ಮತ್ತು ಹೆಣ್ಣು ಹಾವುಗಳು ಲೈಂಗಿಕ ಕ್ರಿಯೆಗೆ ತೊಡಗುವುದು ಮಳೆಗಾಲ ಮತ್ತು ಛಳಿಗಾದಲ್ಲಿ ಮಾತ್ರ. ಹೆಣ್ಣು ಹಾವು ಈ ಕಾಲದಲ್ಲಿ ಗರ್ಭಧರಿಸಿ ಬೇಸಿಗೆ ಹೊತ್ತಿಗೆ ಮೊಟ್ಟೆಯಿಟ್ಟು, ಬೇಸಿಗೆಯಲ್ಲಿ ಈ ಮೊಟ್ಟೆಗಳು ಮರಿಯಾಗುತ್ತವೆ.

ಲೈಂಗಿಕ ಕ್ರಿಯೆಗೆ ಕೂಡುವ ಸಮಯದ ಮುನ್ನ ಹೆಣ್ಣು ಹಾವುಗಳಿಗೆ ಋತುಸ್ರಾವವುಂಟಾಗುತ್ತೆ. ಇದಕ್ಕೆ (Reproductive cycle) ಎಂದು ಹೇಳುತ್ತಾರೆ. ಈ ಕಾಲದಲ್ಲಿ ಇವು ಚಲಿಸುವಾಗ, ವಿಸರ್ಜಿಸಲ್ಪಟ್ಟ ರಜಸ್ಸು ಭೂಮಿಗೆ ಸೇರುತ್ತೆ. ಅದರಲ್ಲೂ ಹುತ್ತಗಳಿಗೆ ಇವು ಪ್ರವೇಶ ಮಾಡುವಾಗ ಹಸನಾದ ಹುತ್ತದ ಮಣ್ಣು ಈ ರಜಸ್ಸನ್ನು ಹೀರಿಕೊಳ್ಳುತ್ತೆ. ಇದೇ ರೀತಿ ಗಂಡು ಹಾವಿನ ವೀರ್ಯವೂ ಅದು ಚಲಿಸುವಾಗ ಹುತ್ತಕ್ಕೆ ಅಂಟಿಕೊಳ್ಳುತ್ತೆ. ಈ ರೀತಿ ಪರಿಷ್ಕರಿಸಲ್ಪಟ್ಟ ಹುತ್ತದ ಮಣ್ಣಿಗೆ ನೀರಾಗಲೀ, ಹಾಲಾಗಲೀ ಬಿದ್ದರೆ (ತನಿ ಎರೆಯುವಾಗ) ಒಂದು ಸುಮಧುರವಾದ ವಾಯು ಉತ್ಪತ್ತಿಯಾಗುತ್ತೆ. ಈ ವಾಯು ಸೇವನೆಯಿಂದ ಮನುಷ್ಯನ ಮನಸ್ಸಿನ ಮೇಲೂ ಮತ್ತು ಆರೋಗ್ಯದ ಮೇಲೂ ಒಳ್ಳೆ ಪ್ರಭಾವವುಂಟಾಗುವುದಲ್ಲದೆ ಜನನೇಂದ್ರಿಯಗಳ ಮೇಲೂ (Reproductive organs) ಒಳ್ಳೆ ಪ್ರಭಾವ ಬೀರುತ್ತೆ. ಈ ವಾಯುಸೇವನೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಚಂದ್ರನ ಪ್ರಭಾವವಿರುವ ಶ್ರಾವಣಮಾಸದಲ್ಲಿ ಮನಸ್ಸಿನ ಮೇಲೆ ಒಳ್ಳೆ ಪರಿಣಾಮಕಾರಿ.

ನಾಗರಹಾವಿನ ವಿಷಯದಲ್ಲಿ ಇನ್ನೂ ಒಂದು ಬಹಳ ಮುಖ್ಯವಾದ ಸತ್ಯವನ್ನು ನಾವು ತಿಳಿದುಕೊಳ್ಳಬೇಕು. ಆಯುರ್ವೇದದ ಪ್ರಕಾರ: ಮಳೆ ನೀರು ಬೀಳದ ಸ್ಥಳದಲ್ಲಿ ದೊರಕುವ ನಾಗರ ಹಾವಿನ ಪೊರೆಯನ್ನು ತಂದು, ಪುಡಿ ಮಾಡಿ ಬಾಳೇ ಹಣ್ಣಿನಲ್ಲಿ ಸೇವಿಸಿ, 10-12 ದಿನ ಹಾಲು ಅನ್ನದಲ್ಲಿ ಪಥ್ಯವಿದ್ದರೆ ಮತ್ತು ಈ ಪಥ್ಯದ ಅವಧಿ ಕಳೆದ ನಂತರ ಪತಿ ಸಂಪರ್ಕ ಮಾಡಿದರೆ, ಎಂಥಾ ಬಂಜೆಯಾದರೂ ಗಂಡುಮಗುವಿನ ತಾಯಿಯಾಗುತ್ತಾಳೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ.

ಇದರಿಂದ ನಾಗರ ಹಾವಿನ ಸಂಪರ್ಕ ಹೊಂದಿದ ಹುತ್ತದ ಮಣ್ಣಿನಲ್ಲೂ ಸಹ, ಈ ಒಂದು ಗುಣ ಸ್ವಲ್ಪವಾದರೂ ಇರಬೇಕಲ್ಲವೇ ? ಇದು ಈಗಿನ ವೈದ್ಯ ವಿಜ್ಞಾನಕ್ಕೆ ಸವಾಲಲ್ಲವೆ ? ಈಗಿನ ವೈದ್ಯ ವಿಜ್ಞಾನಿಗಳು ಪರೀಕ್ಷೆ ಮಾಡಲಿ. ಈ ದೃಷ್ಟಿಯಿಂದ ಮುಖ್ಯವಾದ ಹಬ್ಬಗಳು ಈ ಶ್ರಾವಣ ಮಾಸದಲ್ಲೇ ಬರುವುದು: ಪ್ರಥಮ ನಾಗರ ಪಂಚಮಿಯಿಂದ ಶುರುವಾಗಿ ವರಮಹಾಲಕ್ಷ್ಮಿ, ಉಪಾಕರ್ಮ, ಗಾಯತ್ರಿ ಪ್ರತಿಪತ್, ಕೃಷ್ಣ ಜನ್ಮಾಷ್ಟಮಿ ಇವುಗಳಲ್ಲದೆ, ಈ ಮಾಸದಲ್ಲಿ ಬರುವ ಪ್ರತಿ ಶನಿವಾರದ ದಿನಗಳನ್ನು ಒಂದು ಗೊತ್ತಾದ ನಿಯಮಿತ ರೀತಿಯಲ್ಲಿ ಆಚರಿಸುವುದು. ಮದುವೆಯಾದ ಹೆಣ್ಣು ಮಕ್ಕಳು ಮೊದಲು 5 ವರ್ಷಗಳ ಮಂಗಳ ಗೌರಿ ಆಚರಿಸುವುದು ಇತ್ಯಾದಿ ಇವುಗಳನ್ನೆಲ್ಲ ಪ್ರತ್ಯೇಕವಾಗಿ ವಿಮರ್ಶೆ ಮಾಡಿರುವುದರಿಂದ ಇಲ್ಲಿ ಪುನಃ ವಿವರಿಸಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಂದರ್ಭದಲ್ಲಿ ಈ ಹುತ್ತದ ಮಣ್ಣಿನ ಬಗ್ಗೆ ಇನ್ನೂ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದು ಸೂಕ್ತ. ಸಾಮಾನ್ಯವಾಗಿ ಚರ್ಮರೋಗಗಳು ಅದರಲ್ಲೂ 'ನಾಗರು' ಎಂದು ಹೇಳುವ ಚರ್ಮರೋಗ ಬಂದರೆ, ಹುತ್ತಕ್ಕೆ ತನಿ ಎರೆದು, ಹುತ್ತದ ಮಣ್ಣನ್ನು ಮೈಗೆ ಲೇಪಿಸಿಕೊಳ್ಳುವುದು ಹಿಂದಿನಿಂದಲೂ ಬಂದಿರುವ ಒಂದು ಆಚರಣೆ. ಹೀಗೆ ಮಾಡಿದ ಮೇಲೆ, ಯಾವ ಔಷಧಿಯಿಂದಲೂ ಗುಣವಾಗದ ಈ ಚರ್ಮ ರೋಗವು (ನಾಗರು) ಗುಣವಾಗುವುದು ಎಲ್ಲರಿಗೂ ತಿಳಿದ ವಿಷಯ. ಇದನ್ನೂ ಸಹ ವೈಜ್ಞಾನಿಕವಾಗಿ ವಿಮರ್ಶೆ ಮಾಡಿದರೆ ಇದರ ಸತ್ಯಾಸತ್ಯತೆ ಗೊತ್ತಾಗುತ್ತೆ.

ಆಯುರ್ವೇದದ ಪ್ರಕಾರ ಮಣ್ಣು ಚರ್ಮದ ಮೇಲೆ ಒಳ್ಳೆ ಪ್ರಭಾವ ಬೀರುತ್ತೆ. (ಇದೇ ಲೇಖಕನಿಂದ ಬರೆಯಲ್ಪಟ್ಟಿರುವ 'ಮತಚಿಹ್ನೆ' ಎಂಬ ಲೇಖನದಲ್ಲಿ ಇದನ್ನು ವಿಶದವಾಗಿ ವಿವರಿಸಲಾಗಿದೆ) . ಈ ರೀತಿ ಪ್ರಭಾವ ಬೀರುವ ಮಣ್ಣು ಅದರಲ್ಲೂ ಹುತ್ತದ ಮಣ್ಣು ಮೊದಲೇ ತಿಳಿಸಿದಂತೆ ಗೆದ್ದಲಿನ ಬಾಯಿಯಿಂದ ಬರುವ ದ್ರವದಿಂದಲೂ, ಹಾವಿನ ರಜಸ್ಸು ಮತ್ತು ರೇಜಸ್ಸುಗಳಿಂದಲೂ ಪರಿಷ್ಕರಿಸಲ್ಪಟ್ಟಿರುವುದರಿಂದ ಚರ್ಮದ ಮೇಲೆ ಅದರಲ್ಲೂ ಚರ್ಮರೋಗಗಳ ಮೇಲೆ ಒಳ್ಳೆ ಪ್ರಭಾವ ಬೀರುತ್ತೆ. ಇದರಲ್ಲಿ ಔಷಧೋಪಯುಕ್ತ ಗುಣವಿರುವುದರಿಂದ, ಈ ರೋಗಗಳು ಗುಣವಾಗುತ್ತೆ. ಸಾಮಾನ್ಯವಾಗಿ ಈ ಚರ್ಮರೋಗಗಳಿಗೆ (ಇಸಬು ಇತ್ಯಾದಿ) ಒಳ್ಳೆ ಕೆಮ್ಮಣ್ಣನ್ನು ತಂದು ನೀರಿನಲ್ಲಿ ಕಲಸಿ, ಪ್ರತಿನಿತ್ಯವೂ ಮಲಗುವಾಗ ಲೇಪನ ಮಾಡಿ ಒಂದು ಬಟ್ಟೆಯನ್ನು ಕಟ್ಟಿಕೊಂಡರೆ ಕೆಲವು ದಿನಗಳಲ್ಲಿ ಪೂರ್ಣವಾಗಿ ವಾಸಿಯಾಗುತ್ತೆಂದು ಆಯುರ್ವೇದದಲ್ಲಿ ಹೇಳಿದೆ. ( ಲೇಪ ಮಾಡಿದ ಮಣ್ಣು ಹಾಸಿಗೆಗೆ ಅಂಟಿ ಕೊಳ್ಳದಿರಲೆಂದು ಬಟ್ಟೆ ಕಟ್ಟಿಕೊಳ್ಳಬೇಕು. )

ಇನ್ನು ಈ ಶ್ರಾವಣಮಾಸದಲ್ಲಿ ಅಂದರೆ ಚಂದ್ರನು ಪೂರ್ಣಿಮಾ ದಿನ ಇರುವ ಮಾಸದಲ್ಲಿ ರವಿಯು ಸಂಚಾರ ಮಾಡುವ ನಕ್ಷತ್ರಗಳು ಮತ್ತು ಅದರ ಪ್ರಭಾವ ವಿಮರ್ಶೆ ಮಾಡೋಣ.

ಚಾಂದ್ರ ಮಾಸವಾದ ಶ್ರಾವಣದಲ್ಲಿ ಸೌರ ಮಾಸವಾದ ಕರ್ಕಾಟಕ ಮಾಸವು ಬರುವುದು ಕರ್ಕಾಟಕ ರಾಶಿಯಲ್ಲಿ ರವಿಯು, ಪುನರ್ವಸು 4ನೇ ಪಾದ, ಪುಷ್ಯ 4 ಪಾದಗಳು ಮತ್ತು ಆಶ್ಲೇಷ 4 ಪಾದಗಳು, ಹೀಗೆ ಮೂರು ನಕ್ಷತ್ರಗಳ


Sri Vidyabharathi Book Centre, Sringeri

CC-O. In Public Domain. Digitized by eGangotri

9 ಪಾದಗಳಲ್ಲಿ ಸಂಚರಿಸುತ್ತಾನೆ. ಪುನರ್ವಸು ನಕ್ಷತ್ರ ಗುರುನಕ್ಷತ್ರ. 'ಅದಿತಿ' ಅಧಿದೇವತೆ. 'ಅದಿತಿ' ಎಂದರೆ ಭೂಮಿ, ಮಾತು ಮತ್ತು ದೇವತೆಗಳ ಜನನಿ ಎಂದು ನಿಘಂಟಿನ ಅರ್ಥ. ಗುರುವಿಗೆ ಬ್ರಹ್ಮ ವಿಷ್ಣು ಅಧಿದೇವತೆ ಪುಷ್ಯ ನಕ್ಷತ್ರ ಶನಿಯ ನಕ್ಷತ್ರ, ಬೃಹಸ್ಪತಿ ಅಧಿದೇವತೆ. ಬೃಹಸ್ಪತಿ ಎಂದರೆ ದೇವತೆಗಳ ಗುರು. ವಿದ್ವಾಂಸ ಎಂದು ನಿಘಂಟಿನ ಅರ್ಥ. ಶನಿಗೆ ಯಮ ಅಧಿದೇವತೆ. ಆಶ್ಲೇಷ ನಕ್ಷತ್ರ ಬುಧನ ನಕ್ಷತ್ರ, ಸರ್ಪ ಅಧಿದೇವತೆ (ಸರ್ಪಾಕಾರದಲ್ಲಿರುವ ಕುಂಡಲಿನಿ) ಬುಧನಿಗೆ ವಿಷ್ಣು ಅಧಿ ದೇವತೆ.

ಬ್ರಹ್ಮಾಂಡದಲ್ಲಿರುವ ಮುಖ್ಯವಾದ ಗ್ರಹಗಳು ಮತ್ತು ನಕ್ಷತ್ರಗಳಿಂದ ಹೊರದೂಡಲ್ಪಟ್ಟ ಕಿರಣಗಳು (Cosmic rays) ಮನುಷ್ಯನ ಮೇಲೆ ಸದಾ ಬೀರುತ್ತಲೇ ಇರುತ್ತೆ. ನವಗ್ರಹಗಳಲ್ಲಿ ಒಂದಾದ ಚಂದ್ರನು ಭೂಮಿಗೆ ಅತಿ ಸಮೀಪದಲ್ಲಿರುವುದರಿಂದ ಅವನು ಸಂಚರಿಸುವಾಗ ಬರುವ ನಕ್ಷತ್ರಗಳ ಸಮೂಹದಿಂದ ಹೊರದೂಡಲ್ಪಟ್ಟ ಕಿರಣಗಳು, ಚಂದ್ರನ ಮೂಲಕ ಭೂಮಿಯ ಮೇಲೂ ಮತ್ತು ಭೂಮಿಯ ಮೇಲಿರುವ ಮನುಷ್ಯನ ಮೇಲೂ ಬೀರುತ್ತಿರುತ್ತವೆ. ನವಗ್ರಹಗಳ ಪೈಕಿ ಅತಿ ವೇಗವಾಗಿ ಚಲನೆ ಇರುವ ಗ್ರಹಗಳು ಮೊದಲನೆಯದು ಚಂದ್ರ, ಎರಡನೆಯದು ರವಿ. ಚಂದ್ರ ಭೂಮಿಯ ಸುತ್ತ ಪೂರ್ತಿ ಬರುವುದಕ್ಕೆ ಕೇವಲ 30 ದಿನ ತೆಗೆದುಕೊಂಡರೆ ( 360 ಡಿಗ್ರಿಗಳಷ್ಟು ಸಂಚಾರ ಮಾಡುವುದಕ್ಕೆ ) ರವಿ 360 ದಿನಗಳನ್ನೇ ತೆಗೆದುಕೊಳ್ಳುತ್ತಾನೆ. (ಕರಾರುವಾಕ್ಕಾಗಿ 365 1/4 ದಿನಗಳು). ಚಂದ್ರನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವ ಕಾಲ ಕೇವಲ 1/4 ದಿನಗಳಾದರೆ, ರವಿಯು 30 ದಿನಗಳನ್ನು ತೆಗೆದುಕೊಳ್ಳುತ್ತಾನೆ. ಶುಕ್ರ ಬುಧರೂ ಸಹ ಇದೇ ವೇಗದಲ್ಲಿದ್ದರೂ, ಈ ಎರಡು ಗ್ರಹಗಳು ಆಗಿಂದಾಗ್ಗೆ ವಕ್ರವಾಗುವುದರಿಂದ, ಇವುಗಳ ಚಲನೆಯನ್ನು ಒಂದು ನಿರ್ದಿಷ್ಟವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಚಂದ್ರ, ರವಿಗಳಿಗೆ ವಕ್ರಗತಿಯೇ ಇಲ್ಲ. ಇದಿಷ್ಟು ಖಗೋಳ ಶಾಸ್ತ್ರದ ರೀತ್ಯಾ ವಿವರಣೆಯಾಯಿತು. ಇದನ್ನು ಗಮನಿಸಿದರೆ, ದೈನಂದಿನದ ಪ್ರಭಾವಕ್ಕೆ ಚಂದ್ರ ಸೂರ್ಯ ಚಲನೆಯನ್ನು ಹೆಚ್ಚು ಗಮನಕ್ಕೆ ತೆಗೆದುಕೊಂಡು, ನಮ್ಮ ಹಬ್ಬಗಳನ್ನು ಮತ್ತು ಆಚರಣೆಗಳನ್ನು ನಿಯಮ ಮಾಡಿದ್ದಾರೆ.

ಪ್ರಕೃತ ರವಿಯು ಪುನರ್ವಸು ನಕ್ಷತ್ರ ಸಮೂಹದಲ್ಲಿ ಸಂಚರಿಸುವಾಗ ನಕ್ಷತ್ರಾಧಿಪತಿಯಾದ ಗುರುವಿನಂತೆಯೂ ಮತ್ತು ನಕ್ಷತ್ರದ ಅಧಿದೇವತೆಯಾದ



Sri Vidyabharathi Book Centre, Sringeri

CC-O. In Public Domain. Digitized by eGangotri

ಅದಿತಿಯಂತೆಯೂ ಮತ್ತು ಗುರುಗ್ರಹಕ್ಕೆ ಅಧಿದೇವತೆಯಾದ ಬ್ರಹ್ಮ ವಿಷ್ಣುವಿನಂತೆಯೂ (ಅಂದರೆ ಸೃಷ್ಟಿ ಸ್ಥಿತಿ) ಪ್ರಭಾವ ಬೀರುತ್ತಾನೆ. ಇದರಂತೆಯೇ ಪುಷ್ಯ ಮತ್ತು ಆಶ್ಲೇಷ ನಕ್ಷತ್ರಗಳಲ್ಲೂ ಸಹ ಅಂದರೆ ಪುಷ್ಯ ನಕ್ಷತ್ರ ಶನಿ ನಕ್ಷತ್ರವೆಂದೂ ಮತ್ತು ಬೃಹಸ್ಪತಿ ಅಧಿ ದೇವತೆಯೆಂದೂ ಹೇಳಿದೆಯಷ್ಟೆ. ಮತ್ತು ಶನಿಗೆ ಅಧಿದೇವತೆ ಯಮ ಎಂದೂ ಸಹ ಹೇಳಿದೆಯಷ್ಟೆ. ಶನಿ ಭಗವಂತನ ಮಹಾಸ್ವನ. ಅವನ ಪ್ರತಿನಿಧಿ, ಧರ್ಮದರ್ಶಿ, ನ್ಯಾಯ, ಸತ್ಯ, ಧರ್ಮಗಳನ್ನು ಎತ್ತಿ ಹಿಡಿಯುವವನು. ಸರ್ವಜೀವಿಗಳ ಇಡೀ ವಿಶ್ವದ ಪ್ರೇಮವನ್ನು, ಪಾವಿತ್ರ್ಯತೆಯನ್ನು ಉದ್ಧರಿಸುವವನು. ಬೃಹಸ್ಪತಿ ದೇವತೆಗಳ ಗುರು. ಸಾತ್ವಿಕ ಮನೋಭಾವ (ಅಡ್ಡದಾರಿಗೆ ಹೋಗುವುದಕ್ಕೆ ಮನಸ್ಸು ಕೊಡುವುದಿಲ್ಲ); ಯಮ ಎಂದರೆ ಸಂಯಮ ಎಂದೂ ಅರ್ಥ. ಅಂದರೆ ಹತೋಟಿಯಲ್ಲಿಟ್ಟುಕೊಳ್ಳುವುದು ಅರ್ಥಾತ್ ಧರ್ಮಾಧರ್ಮಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅಥವಾ ನಿಯಂತ್ರಿಸುವುದು.

ಆಶ್ಲೇಷ ನಕ್ಷತ್ರ ಬುಧನ ನಕ್ಷತ್ರ ಮತ್ತು ಸರ್ಪ ಅಧಿ ದೇವತೆ ಎಂದೂ ಬುಧನಿಗೆ ವಿಷ್ಣು ಅಧಿ ದೇವತೆಯೆಂದೂ ಹೇಳಿದೆಯಷ್ಟೆ; ಸರ್ಪ ಎಂದರೆ ಕುಂಡಲಿನಿ ಅರ್ಥಾತ್ ಮಿದುಳು. ವಿಷ್ಣು ಸ್ಥಿತಿಗೆ ಕಾರಕ ಮನಸ್ಸು ಸಾತ್ವಿಕವಾಗಿರಲಿ ಮತ್ತು ಸಾತ್ವಿಕ ಮನೋಭಾವನೆಯನ್ನು ರೂಢಿಸಿಕೊಳ್ಳುವ ಸ್ಥಿತಿಯುಂಟಾಗಲೀ ಎಂಬುದೇ ಇದರ ಪರಮಾರ್ಥ.

ಹೀಗೆ ರವಿಯು ಈ ನಕ್ಷತ್ರಗಳ ಸಮೂಹದಲ್ಲಿ ಸಂಚರಿಸುವಾಗ ಮೇಲೆ ಹೇಳಿದ ಗುಣಗಳೆಲ್ಲವೂ ಮನುಷ್ಯನ ಮೇಲೆ ಸರಿಯಾದ ರೀತಿಯಲ್ಲಿ ಪ್ರಭಾವ ಬೀರಬೇಕಲ್ಲವೇ?

ಈ ರೀತಿ ಪ್ರಭಾವ ಬೀರುವಾಗ ಪ್ರಕೃತಿಗನುಸಾರವಾಗಿ, ಮನುಷ್ಯ ಈ ಪ್ರಭಾವದ ಒಳ್ಳೆಯದನ್ನು ಪಡೆಯುವ ಸಲುವಾಗಿ ಕೆಲವು ಆಚರಣೆಗಳನ್ನು ನಿಯಮ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡರೆ ನಾಗಪಂಚಮಿಯ ಪರಮಾರ್ಥವು ಗೊತ್ತಾಗುತ್ತೆ.

ಮೊದಲೇ ತಿಳಿಸಿದಂತೆ ಶ್ರಾವಣ ಮಾಸ, ಚಂದ್ರನ ಮಾಸ. ಅಂದರೆ ಪೂರ್ತ ಮನಸ್ಸಿನ ಮೇಲೆ ಪ್ರಭಾವ ಬೀರುವ ಮಾಸ. ಈ ಮಾಸದಲ್ಲಿ ರವಿಯು ಸಂಚರಿಸುವ ನಕ್ಷತ್ರಗಳ ಪ್ರಭಾವ ಚಂದ್ರನ ಮೂಲಕ ಮನುಷ್ಯನ ಮೇಲೆ ಬೀರುತ್ತೆ. ಚಂದ್ರನು ಶುದ್ಧ ಚತುರ್ಥಿಯಂದು ಉಪಕೇಂದ್ರಕ್ಕೆ ಬಂದು ಪಂಚಮಿಯ ದಿನ ಉಪ ತ್ರಿಕೋಣಕ್ಕೆ ಬರುತ್ತಾನೆ. ಈ ದಿನಗಳಲ್ಲಿ ಅವನ ಪ್ರಭಾವ ಮನುಷ್ಯನ



Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಹೆಚ್ಚು ಬೀರುತ್ತೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ದಿನಗಳಿಂದ ಮುಂದೆ ಚಂದ್ರನ ಚಾರದಿಂದ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸಲು ಮತ್ತು ಒಳ್ಳೆಯದನ್ನು ಪಡೆದುಕೊಳ್ಳಲು ಕೆಲವು ಧರ್ಮಾಚರಣೆಗಳನ್ನು ಹಬ್ಬದಂತೆ ಆಚರಿಸಲು ನಿಯಮ ಮಾಡಿದ್ದಾರೆ. ಈ ದೃಷ್ಟಿಯಿಂದ ಈ ದಿನದಿಂದ ಮನಸ್ಸಿನ ಮೇಲೆ ಒಳ್ಳೆ ಪ್ರಭಾವ ಬೀರಿ ಪಾರಮಾರ್ಥದ ಕಡೆ ಮನಸ್ಸು ತಿರುಗಿಸುವುದರ ಮೂಲಕ ಮಾನಸಿಕ ಶಾಂತಿ ಸಿಗುವಂತಾಗುತ್ತೆ. ಯಾವಾಗ ಮನಶ್ಶಾಂತಿ ಉಂಟಾಗುತ್ತೋ ಆವಾಗ ಮನಸ್ಸಿಗೆ ಒಂದು ನೆಮ್ಮದಿ ಮತ್ತು ಹರ್ಷವುಂಟಾಗುತ್ತೆ. ಇದಕ್ಕಿಂತ ಮಿಗಿಲಾದ್ದು ಇನ್ನೇನು ಬೇಕು. ಹೀಗೆ ಮನಶ್ಶಾಂತಿ ಸಿಗಬೇಕಾದರೆ ಆಯಾಯಾ ದಿನಗಳಲ್ಲಿ ಒಂದು ಗೊತ್ತಾದ ಆಚರಣೆ ಮತ್ತು ಆಹಾರ ಸೇವನೆ ಮಾಡಬೇಕು. ಇದರಿಂದ ಪ್ರಕೃತಿ ಬದಲಾವಣೆಯಿಂದ ಉಂಟಾಗಬಹುದಾದ ಅನಾರೋಗ್ಯವನ್ನು ತಡೆಗಟ್ಟಿ ಒಳ್ಳೆ ಆರೋಗ್ಯವಾಗಿರುವುದಕ್ಕೆ ಪ್ರಯತ್ನಪಡುವುದೇ ಇದರ ಪರಮಾರ್ಥ. ಹೀಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿರುವುದೇ ಈ ಹಬ್ಬಗಳ ಆಚರಣೆಯ ಮುಖ್ಯ ಉದ್ದೇಶ. ಇದಕ್ಕಿಂತ ಮಿಗಿಲಾದ್ದು ಮತ್ತಾವುದಿದೆ ?

ಇದರಿಂದ ಪ್ರಕೃತಿಗನುಸಾರವಾಗಿ ನಮ್ಮ ಆರೋಗ್ಯವನ್ನು (ದೈಹಿಕ ಮತ್ತು ಮಾನಸಿಕ) ಕಾಪಾಡಿಕೊಳ್ಳುವುದಕ್ಕೆ ಈ ಮಾಸದಿಂದ (ಶ್ರಾವಣ ಮಾಸದಿಂದ) ಮತ್ತು ಈ ತಿಥಿಯಿಂದ (ಪಂಚಮಿಯಿಂದ) ಶುರುಮಾಡುವುದೇ ಈ ಗರುಡ ಪಂಚಮಿ ಆಚರಣೆಯ ಪರಮಾರ್ಥ.

(ಮುಂದೆ ಬರುವ ಹಬ್ಬಗಳು ಅದರಲ್ಲೂ ಚಾತುರ್ಮಾಸಗಳಲ್ಲಿ ಬರುವ ಹಬ್ಬಗಳನ್ನು ಈ ವೈಜ್ಞಾನಿಕ ದೃಷ್ಟಿಯಿಂದ ಪ್ರತ್ಯೇಕ ಪ್ರತ್ಯೇಕವಾಗಿ ವಿಮರ್ಶೆ ಮಾಡಲಾಗಿದೆ.)

ಇನ್ನು ಇದಕ್ಕೆ ಒಡಹುಟ್ಟಿದ ಹಬ್ಬವೆಂದು ಏಕೆ ಕರೆದರು ? ಹಿಂದಿನ ಲೇಖನದಲ್ಲಿ ತಿಳಿಸಿದಂತೆ, ಹಾವುಗಳು ಅದರಲ್ಲೂ ನಾಗರ ಹಾವುಗಳು, ಸಾಮಾನ್ಯವಾಗಿ 40 ರಿಂದ 60 ರವರೆಗೆ ಮೊಟ್ಟೆಗಳನ್ನು ಇಡುತ್ತವೆ. ಮೊಟ್ಟೆಗಳು ಮರಿಯಾದ ನಂತರ, ಈ ಮರಿಗಳು ಒಂದಕ್ಕೊಂದು ಕಚ್ಚಾಡುವುದಿಲ್ಲ. ಅವುಗಳ ಪಾಡಿಗೆ ಅವು ಆಹಾರವನ್ನು ಅರಸಿಕೊಂಡು ನಾನಾಕಡೆ ಹೊರಟುಹೋಗುತ್ತವೆ. ಮರಿಗಳು ದೊಡ್ಡದಾದ ಮೇಲೆ ಸಾಮಾನ್ಯವಾಗಿ ಒಂದೇ ಪ್ರದೇಶದಲ್ಲಿ (territory) ವಾಸ ಮಾಡುವುವು. ಹೀಗೆ ಒಂದೇ ಪ್ರದೇಶದಲ್ಲಿ ವಾಸ ಮಾಡುವ ಈ ಹಾವುಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕಸ್ಮಾತ್ ಒಂದಕ್ಕೊಂದು ಸಂಘಟಿಸಿದಾಗ ಕಚ್ಚಾಡುವುದಿಲ್ಲ; ಅವುಗಳ ಪಾಡಿಗೆ ಅವು ತಮ್ಮ ದಾರಿಯಲ್ಲಿ ಹೊರಟುಹೋಗುತ್ತವೆ. ಪ್ರಾಣಿಶಾಸ್ತ್ರದ ಪ್ರವೀಣರ ಪ್ರಕಾರ, ಬೇರೆ ಪ್ರದೇಶಗಳಿಂದ (territory) ಬಂದ ಹಾವುಗಳು ಸಂದರ್ಶಿಸಿದಾಗ ತಮ್ಮ ಅಸ್ತಿತ್ವಕ್ಕೆ ಜಗಳವಾಡುತ್ತವೆ. ಒಂದೇ ಪ್ರದೇಶದಲ್ಲಿರುವ ಈ ಹಾವುಗಳು ಬೇರೆ ಹಾವುಗಳನ್ನು ಸಂದರ್ಶಿಸಿದಾಗ, ಇವು ಬೇರೆ ಪ್ರದೇಶದವುಗಳು ಎಂದು ಗೊತ್ತಾಗುತ್ತೆ. ಇದು ಪ್ರಕೃತಿದತ್ತವಾದದ್ದು. ಈ ದೃಷ್ಟಿಯಿಂದ ಹೇಗೆ ಒಂದೇ ಕುಟುಂಬಕ್ಕೆ ಸೇರಿದ ಅಣ್ಣ ತಮ್ಮಂದಿರು ಸಹಬಾಳ್ವೆ ಮಾಡಬೇಕು (ಈಗಿನ ಕಾಲದಲ್ಲಿ ಈ ಪದ್ಧತಿ ನಶಿಸಿ ಹೋಗುತ್ತಿದೆ). ಮತ್ತು ಒಬ್ಬರಿಗೊಬ್ಬರು ಸಹಾಯ ಮಾಡಬೇಕು. (ಇದೂ ಸಹ ಇಲ್ಲವಾಗುತ್ತಿದೆ.) ಅದೇ ರೀತಿ ಈ ಹಾವುಗಳು ಸಹ ಒಂದೇ ಪ್ರದೇಶದವುಗಳು ಸಹಬಾಳ್ವೆ ಮಾಡುತ್ತವೆ. ಈ ಕಾರಣದಿಂದ ಈ ಹಬ್ಬವನ್ನು ಒಡ ಹುಟ್ಟಿದ ಹಬ್ಬವೆಂದು ಕರೆದರು.

ಒಂದೇ ಪ್ರದೇಶಕ್ಕೆ ಸೇರಿದ ಈ ಹಾವುಗಳಿಗೆ ಇರುವ ಸಹಬಾಳ್ವೆಯ ಮನೋಭಾವನೆ ಮನುಷ್ಯವರ್ಗದಲ್ಲಿ ಹಿಂದೆ ಇತ್ತು. ಆದರೆ ಈ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಣ್ಣ ಒಂದು ಪಕ್ಷಕ್ಕೆ ಸೇರಿದರೆ ತಮ್ಮ ಒಂದು ಪಕ್ಷಕ್ಕೆ ಸೇರುವುದು, ಅಪ್ಪ ಒಂದು ಪಕ್ಷ ಮಗ ಒಂದು ಪಕ್ಷ, ಅಮ್ಮ ಒಂದು ಪಕ್ಷವಾದರೆ ಮಗ ಅಥವಾ ಮಗಳು ಒಂದು ಪಕ್ಷ. ಗಂಡ ಹೆಂಡಿರು ಬೇರೆ ಬೇರೆ ಪಕ್ಷಗಳು, ಬಾಲ್ಯದಿಂದಲೂ ಒಂದೇ ಭಾವನೆಯುಳ್ಳ ಪ್ರಾಣ ಸ್ನೇಹಿತರು ಬೇರೆ ಪಕ್ಷ - ಹೀಗೆ ರಾಜಕೀಯ ಪ್ರವೇಶಮಾಡಿ, ಅಧಿಕಾರದ ಆಸೆಯಿಂದ ಮಾಡಬಾರದ್ದನ್ನೆಲ್ಲಾ ಮಾಡಿ ತಮ್ಮ ತಮ್ಮಲ್ಲೇ ಬದ್ಧ ವೈರಿಗಳಾಗುತ್ತಿರುವುದು ಈಗಿನ ಸಮಾಜದ ವೈಖರಿ! ಇದು ಎಂಥಾ ವಿಪರ್ಯಾಸ ! ಇದು ಸಹಬಾಳ್ವೆಯೇ ? ವಿಷಜಂತು ಈ ಸರ್ಪಗಳಿಗಿಂತಲೂ ಮನುಷ್ಯನು ಪ್ರಜಾ ಪ್ರಭುತ್ವದ ಹೆಸರಿನಲ್ಲಿ ಕೀಳಾಗುತ್ತಿದ್ದಾನೆ.

ಇನ್ನು ನಮ್ಮ ಪುರಾಣಗಳಲ್ಲಿ ವರ್ಣನೆ ಮಾಡಿರುವಂತೆ, ನಾಗರ ಹಾವಿಗೆ 3 ಹೆಡೆಗಳು, 5 ಹೆಡೆಗಳು ಮತ್ತು 7 ಹೆಡೆಗಳ ಪರಮಾರ್ಥವನ್ನು ವಿಮರ್ಶೆ ಮಾಡಿರುವ ವಿಷಯವನ್ನು 'ಶೇಷಶಾಯಿ' ಎಂಬ ಲೇಖನದಲ್ಲಿ ವಿವರಿಸಲಾಗಿದೆ.

ಶ್ರೀಮನ್ನಾರಾಯಣನು, ಶೇಷಶಾಯಿ ಅಂದರೆ 7 ಹೆಡೆಯ ಸರ್ಪದ ಮೇಲೆ ಮಲಗಿದ್ದಾನೆ. ಶ್ರೀಮನ್ನಾರಾಯಣನ ಬೇರೆ ರೂಪಗಳಾದ ಶ್ರೀರಂಗನಾಥ (ಶ್ರೀಮದನಂತಪದ್ಮನಾಭ ಇತ್ಯಾದಿ) ಇತರ ದೇವತೆಗಳೂ ಸಹ 7 ಹೆಡೆ ಸರ್ಪದ



Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಮಲಗಿರುವ ಹಾಗೆ ವರ್ಣಿಸಿದ್ದಾರೆ. ವಿಷ್ಣುವು (ಶ್ರೀಮನ್ನಾರಾಯಣ) ಸ್ಥಿತಿಗೆ ಕಾರಕ. ಮನುಷ್ಯನ ಸ್ಥಿತಿಗೆ ಅಂದರೆ ದೇಹಾರೋಗ್ಯಕ್ಕೂ ಮತ್ತು ಮಾನಸಿಕಾರೋಗ್ಯಕ್ಕೂ ಶ್ರೀ ವಿಷ್ಣುವೇ ಕಾರಕನೆಂದಾಯಿತು. ಈ ರೀತಿ ಸ್ಥಿತಿಗೆ ಕಾರಕನಾದ ಶ್ರೀ ವಿಷ್ಣುವು ಸರ್ಪದ ಮೇಲೆ ಮಲಗಿರುವುದು ಸಪ್ತಧಾತುಗಳನ್ನು ನಿಯಂತ್ರಿಸುವ ಸಂಕೇತ. ಅದೇ ರೀತಿ ಮನುಷ್ಯನು (ನಮ್ಮ ಮಹರ್ಷಿಗಳು ಅನುಗ್ರಹ ಮಾಡಿರುವ ಧರ್ಮಾಚರಣೆಗಳ ಮೂಲಕ, ಮಿದುಳನ್ನು (ಹೆಡೆಯಾಕಾರದಲ್ಲಿರುವುದು) ನಿಯಂತ್ರಿಸಿ ಸಾಧನೆ ಮಾಡುವುದೇ ಇದರ ಪರಮಾರ್ಥ.

ಹೀಗೆ, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ವರ್ಷಕ್ಕೊಂದಾವರ್ತಿ ಶ್ರಾವಣ ಮಾಸದಲ್ಲಿ ಪ್ರಯತ್ನ ಮಾಡುವುದೇ ಶ್ರಾವಣಮಾಸದಲ್ಲಿ ಬರುವ ನಾಗರಪಂಚಮಿಯ ಪರಮಾರ್ಥ. ಚಂದ್ರನು ಮನಸ್ಸಿಗೆ ಕಾರಕನೆಂದೂ ಮತ್ತು ಶ್ರಾವಣಮಾಸದಲ್ಲಿ ಚಂದ್ರನ ಪ್ರಭಾವ ಜಾಸ್ತಿ ಎಂದೂ ಹೇಳಿದೆಯಷ್ಟೆ. ಆದ್ದರಿಂದ ಚಂದ್ರನ ಮಾಸವಾದ ಶ್ರಾವಣ ಮಾಸದಲ್ಲಿ ಪಂಚಮಿಯಿಂದ ಈ ವ್ಯವಸಾಯ ಶುರುಮಾಡಬೇಕು. ನಂತರ ಇದಕ್ಕೆ ಸಂಬಂಧಪಟ್ಟ ಆಚರಣೆಗಳನ್ನು (ಅಂದರೆ ಮಹಾಲಕ್ಷ್ಮೀವ್ರತ, ಉಪಾಕರ್ಮ, ಗಾಯತ್ರಿ ಪ್ರತಿಪತ್, ಕೃಷ್ಣ ಜನ್ಮಾಷ್ಟಮಿ) ಹಬ್ಬದ ರೂಪದಲ್ಲಿ ಮಾಡುವಂತೆ ನಿಯಮ ಮಾಡಿದ್ದಾರೆ. ಇವುಗಳ ಪರಮಾರ್ಥವನ್ನು ಒಂದೊಂದನ್ನೇ ಪ್ರತ್ಯೇಕವಾಗಿ ವಿಮರ್ಶೆ ಮಾಡಲಾಗಿದೆ. ಇಲ್ಲಿ ಒಂದು ಹಬ್ಬದ ಆಚರಣೆಯನ್ನು ಮಾತ್ರ ಒಂದೇ ಮಾತಿನಲ್ಲಿ ಹೇಳುವುದಾದರೆ, 'ವರ ಮಹಾಲಕ್ಷ್ಮಿ' ವ್ರತವನ್ನು ಕೇವಲ ಧನ ಧಾನ್ಯ ಸಂಪತ್ತಿಗೋಸ್ಕರ ಆಚರಿಸುವುದಲ್ಲ. ಲಕ್ಷ್ಮೀದೇವಿಗೆ ಪೂಜೆಯ ರೂಪದಲ್ಲಿ ಲಂಚಕೊಟ್ಟು ಒಲಿಸಿಕೊಳ್ಳುವುದಕ್ಕಲ್ಲ. 'ಲಕ್ಷ್ಮಿ' ಎಂದರೆ ಸಂಪತ್ತು. ಇಲ್ಲಿ ಜ್ಞಾನ ಸಂಪತ್ತನ್ನು ಸಂಪಾದಿಸುವುದಕ್ಕೋಸ್ಕರ ಮತ್ತು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಈ ಹಬ್ಬವನ್ನು ಆಚರಿಸುವ ಉದ್ದೇಶ. ಈ ಜ್ಞಾನ ಸಂಪತ್ತನ್ನು, ಮನಃಕಾರಕನಾದ ಚಂದ್ರನ ಮಾಸದಿಂದ (ಶ್ರಾವಣ ಮಾಸದಿಂದ) ಅಭಿವೃದ್ಧಿ ಪಡಿಸಲು ಶುರುಮಾಡಿ ಒಂದು ಮಟ್ಟಕ್ಕೆ ಬಂದ ನಂತರ, ಅಶ್ವಯುಜ ಮಾಸದಲ್ಲಿ ಮೂಲಾ ನಕ್ಷತ್ರದ ದಿನ ಸರಸ್ವತಿ ಪೂಜೆಯನ್ನು (ಶಾರದಾ ಪೂಜೆಯನ್ನು) ಮಾಡುವುದು. ಈ ವಿಚಾರ ಅಂದರೆ ಅಶ್ವಯುಜ ಮಾಸಕ್ಕೂ ಮತ್ತು ಸರಸ್ವತಿ ಪೂಜೆಗೂ (ಶಾರದಾ ಪೂಜೆಗೂ) ಇರುವ ಸಂಬಂಧ, ಪ್ರತ್ಯೇಕ "ಅಶ್ವಯುಜ ಮಾಸದ ಮಹತ್ವ" ಎಂಬ ಲೇಖನದಲ್ಲಿ ವಿವರವಾಗಿ ವಿಮರ್ಶೆ ಮಾಡಲಾಗಿದೆ.


Sri Vidyabharathi Book Centre, Sringeri

CC-0. In Public Domain. Digitized by eGangotri

ಕೊನೆಯಾದರೂ, ಈ ನಾಗರ ಪಂಚಮಿ ಆಚರಣೆಯನ್ನು ಲೌಕಿಕವಾಗಿಯೂ ಸಹ ವಿಮರ್ಶೆ ಮಾಡುವುದು ಸೂಕ್ತ. ಸಾಮಾನ್ಯವಾಗಿ ಜ್ಯೇಷ್ಠ ಆಷಾಢ ಮಾಸಗಳಿಂದ ಮಳೆ ಶುರು ಆಗುತ್ತೆ. ಈ ಕಾಲದಲ್ಲಿ ಭೂಮಿಯನ್ನು ಉತ್ತು, ಬಿತ್ತು ವ್ಯವಸಾಯವನ್ನು ಮಾಡುವುದು ಸರ್ವೇ ಸಾಮಾನ್ಯ. ಹೀಗೆ ಬಿತ್ತಿದ ಬೀಜಗಳು ಪೈರಾಗಿ, ಶ್ರಾವಣ ಮಾಸದ ಕೊನೆಯಲ್ಲಿ ಹೂವು ಕಾಳಾಗುವುದಕ್ಕೆ ಪ್ರಾರಂಭವಾಗುತ್ತೆ. ಈ ಸಮಯದಲ್ಲಿ ರೈತನ ಪರಮ ಶತ್ರುವಾದ ಕಾಡು ಇಲಿಗಳು, ಕಾಳಾದ ದವಸ ಧಾನ್ಯಗಳನ್ನು ತಿಂದು, ಅಪಾರ ನಷ್ಟ ಮಾಡುವ ವಿಷಯ ಎಲ್ಲರಿಗೂ ಅನುಭವವಿದೆ. ಈ ರೀತಿ ಫಸಲನ್ನು ನಷ್ಟ ಮಾಡುವ ಇಲಿಗಳನ್ನು ನಾಶಮಾಡಲು ಪ್ರಕೃತಿ ದತ್ತವಾದ ಹಾವುಗಳು ಮನುಷ್ಯನಿಗೆ ವರಪ್ರಸಾದ. ಯಾವಾಗ ಇಲಿಗಳು ನಾಶವಾಗುತ್ತೋ, ಆವಾಗ ರೈತನು ಫಸಲಿನ ಪೂರ್ಣ ಲಾಭವನ್ನು ಪಡೆದಂತಾಗುತ್ತೆ. ಹೀಗೆ ತನ್ನ ಆಹಾರವನ್ನು ಪರೋಕ್ಷವಾಗಿ ಕಾಪಾಡುವ ಹಾವನ್ನು ಕೃತಜ್ಞತೆಯಿಂದ ಪೂಜಿಸಲು ಫಸಲು ಶುರುವಾಗುವಾಗಲೇ ಒಂದು ಸಂಪ್ರದಾಯ ಬಂದಿರಬಹುದು. ನಿಜವಾಗಲೂ ಜೀವಂತ ಹಾವುಗಳನ್ನು ಪ್ರತ್ಯಕ್ಷವಾಗಿ ಪೂಜಿಸುವುದಕ್ಕಾಗುತ್ತದೆಯೇ ಎಂದು ಕೇಳಬಹುದು. ಯಾವಾಗ ನಾವು ಸೇವನೆ ಮಾಡುವ ಆಹಾರವನ್ನು ರಕ್ಷಣೆ ಮಾಡುವ ಹಾವುಗಳನ್ನು ಪೂಜ್ಯ ಭಾವನೆಯಿಂದ ಕಾಣುತ್ತೇವೋ ಆವಾಗ ಈ ಹಾವುಗಳನ್ನು ಅಕಾರಣವಾಗಿ ಮತ್ತು ಹಣದಾಸೆಗೋಸ್ಕರ ಕೊಲ್ಲುವುದಕ್ಕೆ ಮನಸ್ಸು ಬರುವುದಿಲ್ಲ. ಒಂದು ಪಾವಿತ್ರ್ಯತೆಯನ್ನು ಉಂಟು ಮಾಡಿರುವುದರಿಂದ ನೈತಿಕ ಭೀತಿ ಇರುತ್ತೆ. ಆದರೆ ಈಗಿನ ಕಾಲದಲ್ಲಿ ಫಸಲನ್ನು ನಾಶ ಮಾಡುವ ಇಲಿಗಳನ್ನು ವಿಷಹಾಕಿ ಸಾಯಿಸುವುದು ಮತ್ತು ಚರ್ಮಕ್ಕೋಸ್ಕರ ಹಾವುಗಳನ್ನು ಸಿಕ್ಕಾಪಟ್ಟೆ ಬೇಟೆಯಾಡಿ ಕೊಲ್ಲುವುದು ಸರ್ವೇಸಾಮಾನ್ಯವಾಗಿದೆ. ಹೀಗೆ ಪ್ರಕೃತಿ ವಿರುದ್ಧವಾಗಿ ನಾವು ನಡೆದುಕೊಳ್ಳುತ್ತಿರುವುದರಿಂದ, ವಿಷದ ಪ್ರಯೋಗದಿಂದ ಇಲಿಗಳನ್ನು ಮಾತ್ರ ಕೊಲ್ಲುವುದಲ್ಲದೆ ಇದರ ಪ್ರಭಾವವನ್ನು ನಾವೂ ಅನುಭವಿಸುತ್ತಿದ್ದೇವೆ. ಇಲಿ ಪಾಷಾಣ, ಕ್ರಿಮಿ ನಾಶಕಗಳು ಮನುಷ್ಯನ ಆರೋಗ್ಯದ ಮೇಲೆ ಯಾವ ರೀತಿ ಕೆಟ್ಟ ಪ್ರಭಾವ ಬೀರುತ್ತದೆ ಎಂಬುದನ್ನು ಈಗ ಪರಿಣತರು (ಅದರಲ್ಲೂ ಪಾಶ್ಚಮಾತ್ಯರು) ಹೊರಗೆಡಹುತ್ತಿದ್ದಾರೆ.

ಈ ದೃಷ್ಟಿಯಿಂದಲೂ ಸಹ ಶ್ರಾವಣ ಮಾಸದಲ್ಲಿ ಈ ನಾಗರ ಪಂಚಮಿ ಆಚರಣೆ ಹೇಳಿರುವುದು ಸಮರ್ಥನೀಯ.



Sri Vidyabharathi Book Centre, Sringeri

CC-O. In Public Domain. Digitized by eGangotri

ಶ
ವ
ಚ
ಜ
ಮ
ಸಂ
ಗಾ
ನಿ
ವಿ
ಮಾ
ಸಂ
ಲಂ
ಸಂ
ಈ
ಚಂ
ಒಂ
ದಿನ
ಅಂ
ಇರು
ಲೇಖ

Sri Vidyabharathi Book Centre, Sringeri

CC-O. In Public Domain. Digitized by eGangotri
ಪುಟದಿಂದ )

4. ಗೋಪಿ ವಸ್ತ್ರಾಪಹರಣ ಇದರ ಪರಮಾರ್ಥವೇನು ?
5. ಪಂಚಾಂಗ ಶ್ರವಣ ಏಕೆ ?
6. ಗ್ರಹಣಾಚರಣೆ - ಏಕೆ ?
7. ಗೋರಕ್ಷಣೆ - ಏಕೆ ?
8. ಸಹಗಮನ - ಇದರ ಪರಮಾರ್ಥ ?
9. ಸುಪ್ರಭಾತ - ಏಕೆ ?
. ಕೈ ಮುಗಿಯುವುದು - ಏಕೆ ?
. ವಾರಗಳು ಹೇಗಾಯಿತು ?
. ಶರದೃತು ?
. ಆಸನ ?
. ಮಹಾಭಾರತದಲ್ಲಿ ಕುಟುಂಬ ಯೋಜನೆ ?
. ಕೃಷ್ಣಸಂಧಾನ ?

*ರಾಮಾಯಣ : (1) ಶ್ರೀ ರಾಮಚಂದ್ರನ ಪಟ್ಟಾಭಿಷೇಕಕ್ಕೆ ವಶಿಷ್ಠರು ಟ್ಟಿಕೊಟ್ಟ ಮುಹೂರ್ತದ ವಿಷಯ ವಶಿಷ್ಠರು ತಪ್ಪು ಮಾಡಿದರೆ ಅಥವಾ ಜ್ಯೋತಿಷ್ಯ ಮುಹೂರ್ತ) ಸುಳ್ಳೇ ? (2) ಶ್ರೀ ರಾಮಚಂದ್ರನು ರಾವಣನ ಸಂಹಾರ ಮಾಡಿದ ಮೇಲ ಂಕೆಯಿಂದ ಅಯೋಧ್ಯೆಗೆ ಪುಷ್ಪಕ ವಿಮಾನದಲ್ಲಿ ಪ್ರಯಾಣ ಮಾಡಿದ. ಈ ವಿಮಾನಕ್ಕೆ ಂಧನ (Petrol) ಎಲ್ಲಿಂದ ಬಂತು? (3) ರಾವಣನಿಗೆ ಹತ್ತು ಶಿರಸ್ಸುಗಳು ಇದ್ದವೇ? ದ್ದರೆ ಯಾವ ಬಾಯಲ್ಲಿ ಮಾತನಾಡುತ್ತಿದ್ದ, ಯಾವ ಬಾಯಿಯಲ್ಲಿ ಊಟ ಮಾಡುತ್ತಿದ್ದ, ಗೆ ಮಲಗುತ್ತಿದ್ದ ಇತ್ಯಾದಿ. (4) ಶ್ರೀ ರಾಮಚಂದ್ರನು ಮರದ ಹಿಂದೆ ಅವಿತುಕೊಂಡು ವಾಲಿಯನ್ನು ಹಾರ ಮಾಡಿದ ಏಕೆ ?*

*ಮಹಾಭಾರತ : (1) ದ್ರೌಪದಿ ವಸ್ತ್ರಾಪಹರಣ ಕಾಲದಲ್ಲಿ ಶ್ರೀ ಕೃಷ್ಣನು ನಿಜವಾಗಿಯೂ ವಾಡ ಮಾಡಿದನೆ? (2) ದ್ರೌಪದಿಗೆ ನಿಜವಾಗಿಯೂ ಐವರು ಪತಿಗಳಿದ್ದರೇ ? (3) ಕುಂತಿಯು ರ್ಣನನ್ನು ಸೇರಿ ಆರು ಮಕ್ಕಳನ್ನು ಪುರುಷ ಸಂಬಂಧವಿಲ್ಲದೇ ಹೇಗೆ ಪಡೆದಳು, ಇದಕ್ಕೆ ಕಾರಣವೇನು ? (4) ಶ್ರೀ ಕೃಷ್ಣನು ನಿಜವಾಗಿಯೂ ಹದಿನಾರು ಸಾವಿರ ಗೋಪಿಕಾ ಸ್ತ್ರೀಯರನ್ನು ಮದುವೆ ಮಾಡಿಕೊಂಡನೆ, ಒಂದು ವೇಳೆ ಹಾಗೆ ಮಾಡಿಕೊಂಡಿದ್ದರೆ, ಶ್ರೀ ಕೃಷ್ಣನನ್ನು ಅನಾದಿ ಹ್ಮಚಾರಿ ಎಂದು ಏಕೆ ಹೇಳಲಾಗಿದೆ ?*

* * * * *

Sri Vidyabharathi Book Centre, Sringeri

CC-O. In Public Domain. Digitized by eGangotri

## ಇದೇ ಲೇಖಕರಿಂದ ಇದುವರೆಗೆ ಪ್ರಕಟವಾಗಿರುವ ಪುಸ್ತಕಗಳು

### (ವೈಜ್ಞಾನಿಕ ದೃಷ್ಟಿಯಲ್ಲಿ)

| | |
|---|---|
| 1. ಗಾಯತ್ರಿ ಮಂತ್ರದ ಮಹತ್ವ | - 10ನೇ ಮುದ್ರಣ |
| 2. ಸಂಧ್ಯಾವಂದನೆ ಮತ್ತು ದೇವತಾರ್ಚನೆ ಮಹತ್ವ | - 8ನೇ ಮುದ್ರಣ |
| 3. ನಾಗರ ಪ್ರತಿಷ್ಠೆ | - 6ನೇ ಮುದ್ರಣ |
| 4. ಉಪನಯನದ ಮಹತ್ವ | - 5ನೇ ಮುದ್ರಣ |
| 5. ಶೇಷಶಾಯಿ ಮತ್ತು ನಾಗಪಂಚಮಿ | - 4ನೇ ಮುದ್ರಣ |
| 6. ಏಕಾದಶಿ ಉಪವಾಸ | - 6ನೇ ಮುದ್ರಣ |
| 7. The Hindu Marriage - A scientific Analysis (in English) | - 1ನೇ ಮುದ್ರಣ |
| 8. ವರ್ಣಾಶ್ರಮ | - 3ನೇ ಮುದ್ರಣ |
| 9. ತೀರ್ಥಯಾತ್ರೆ ಮತ್ತು ದೇವಸ್ಥಾನಗಳು | - 5ನೇ ಮುದ್ರಣ |
| 10. ತರ್ಪಣ ಮತ್ತು ವೈದೀಕ ಏಕೆ | - 6ನೇ ಮುದ್ರಣ |
| 11. ಚಾತುರ್ಮಾಸ ಆಚರಣೆ | - 5ನೇ ಮುದ್ರಣ |
| 12. ಸಂಕ್ರಾಂತಿ, ಶಿವರಾತ್ರಿ, ಉಗಾದಿ | - 4ನೇ ಮುದ್ರಣ |
| 13. ಜಾತಕ | - 5ನೇ ಮುದ್ರಣ |
| 14. ರಾಮಾಯಣ, ಪುತ್ರಕಾಮೇಷ್ಟಿ ಯಾಗ ಮತ್ತು ಪಟ್ಟಾಭಿಷೇಕದ ಮುಹೂರ್ತ | - 4ನೇ ಮುದ್ರಣ |
| 15. ಮಹಾಭಾರತದ ಕೆಲವು ಸನ್ನಿವೇಶಗಳು | - 3ನೇ ಮುದ್ರಣ |
| 16. ಪಂಚಾಂಗ ದರ್ಶನ | - 3ನೇ ಮುದ್ರಣ |
| 17. ಕರದರ್ಶನ, ನೂತನ ವಸ್ತ್ರಧಾರಣೆ, ಕಾಲುಂಗುರ ಧಾರಣೆ, ಮಾವಿನ ತೋರಣ, ಕೋಸಂಬರಿ ಮತ್ತು ಮಡಿ | - 2ನೇ ಮುದ್ರಣ |
| 18. ಪಂಚಾಮೃತ ಅಭಿಷೇಕ, ನವಗ್ರಹ ಶಾಂತಿ, ಆಯುಷ್ಕರ್ಮ | - 2ನೇ ಮುದ್ರಣ |
| 19. ಅಕ್ಷತೆ, ಅನಧ್ಯಯನ, ದೃಷ್ಟಿ ತೆಗೆಯುವುದು ಮಲಗುವುದು - ಏಳುವುದು, ರಾಹುಕಾಲ | - 1ನೇ ಮುದ್ರಣ |

*ಅಂಚೆ ವೆಚ್ಚ ಪ್ರತ್ಯೇಕ*

ಪುಸ್ತಕಗಳಿಗೆ : ಎಂ.ಎಸ್. ಚಕ್ರಪಾಣಿ

S/o ಎಚ್.ಕೆ. ಎಸ್. ರಾವ್

ಮಾಧ್ವಲ್ಯ, # 231/1, 7ನೇ ಕ್ರಾಸ್, ಕ್ಷೇತ್ರಯ್ಯ ರಸ್ತೆ,

ಕೆ. ಆರ್. ಮೊಹಲ್ಲಾ, ಮೈಸೂರು - 570 024 ☎ : 2422550

Sri Vidyabharathi Book Centre, Sringeri